ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 | Issue : 284 | Sunday 21-07-2024 | E-mail : maruti.b.hosamani76@gmail.com | Page: 4 | Price : Rs. 1/-

“ಎಲ್ಲಾರೂ ಸೇರಿ ಡೆಂಗ್ಯೂ ಸೋಲಿಸೋಣ”

ತಿರೂರು : ಮನ್ನಿಕಟ್ಟಿ ಗ್ರಾಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ, ಪ್ರಾಥಮಿಕ ಆರೋಗ್ಯ ಕೇಂದ್ರ ತಿರೂರ ಸಹ ಯೋಗದಲ್ಲಿ ಮನ್ನಿಕಟ್ಟಿ ಗ್ರಾಮದಲ್ಲಿ ಮಳೆಗಾಲದಲ್ಲಿ ಸಾಂಕ್ರಾಮಿಕವಾಗಿ ಹರಡುವ ರೋಗಗಳ ತಡೆಗೆ, ಮುಂಜಾಗ್ರತೆಯ "ಆರೋಗ್ಯ ಅರಿವು ಜಾಗೃತಿ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ, ಎಸ್ ಎಸ್ ಅಂಗಡಿಯವರು, ಆರೋಗ್ಯವಂತ ಸಮಾಜಕ್ಕಾಗಿ ವೈಯಕ್ತಿಕ ಸ್ವಚ್ಛತೆ ಪರಿಸರ ಸ್ವಚ್ಛತೆ, ಮುಂಜಾಗ್ರತೆ ಕ್ರಮಗಳ ಪಾಲನೆ ಮಾಡಬೇಕು. ಡೆ–

ಂಗ್ಯೂ, ಚಿಕೂನ್ ಗುನ್ಯಾ, ಮಲೇರಿಯಾ, ಆನೆಕಾಲು ರೋಗ ಮೆದುಳು ಜ್ವರ ರೋಗಗಳು ಸೊಳ್ಳೆಗಳ ಕಡಿತ ದಿಂದ ಸಾಂಕ್ರಾಮಿಕವಾಗಿ ಒಬ್ಬರಿಂದ ಒಬ್ಬರಿಗೆ ಸಾಂಕ್ರಾಮಿಕವಾಗಿ ಹರಡುವುವು ಡೆ–ಂಗ್ಯೂ, ಚಿಕೂನ್ ಗುನ್ಯಾ ವೈರಾಣು ರೋಗಕ್ಕೆ ಕಾರಣವಾದ "ಈಡೀಜ್ ಇಜಿಪ್ತೆ" ಸೊಳ್ಳೆಯು ಸಂತಾನೋತ್ಪತ್ತಿಗೆ ಸ್ವಚ್ಛ ನೀರಿನಲ್ಲಿ ತತ್ತಿ ಇಟ್ಟು ಲಾರ್ವಾ ಉತ್ಪತ್ತಿ ಮಾಡುವುದು. ಮುಂಜಾಗ್ರತೆ ಕ್ರಮವಾಗಿ ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು. ಟೆಂಗಿನ ಚಿಪ್ಪು, ಒಡೆದ ಬಾಟಲ್, ಟೈರ್ ಟ್ಯೂಬ್, ಅನುಪಯುಕ್ತ ವಸ್ತು ಕಸ ವಿಲೇವಾರಿ ಮಾಡಬೇಕು. ಮನೆ ಸುತ್ತ ಮುತ್ತ ಪರಿಸರ ಸ್ವಚ್ಛತೆ ಕಾಪಾಡಿ ಕೊಳ್ಳಬೇಕು ಸೊಳ್ಳೆ ಪರದೆ ನಿರೋಧಕ ಬಳಸಬೇಕು ಯಾವುದೇ ತರಹ ಜ್ವರ ಕಾಣಿಸಿದರೆ ಹತ್ತಿರದ ಸರಕಾರಿ ಆಸ್ಪತ್ರೆಗೆ ಭೇಟಿ. ಡೆಂಗ್ಯೂ ರೋಗದ ಭಯ ಬೇಡ ಮುನ್ನೆಚ್ಚರಿಕೆ ಕ್ರಮಗಳ ಪಾಲನೆಯೇ ಮುದ್ದು. "ಆರೋಗ್ಯವಂತ ಕುಟುಂಬ ಆರೋಗ್ಯವಂತ ಸಮಾಜ" ನಿರ್ಮಾಣಕ್ಕೆ ಡೆಂಗ್ಯೂ ಮಹಾಮಾರಿ ತಡೆಗೆ, ಈಡೀಜ್ ಇಜಿಪ್ತೆ ಲಾರ್ವಾ ನಿರ್ಮೂಲನೆಗೆ ಕೈಜೋಡಿಸಿರಿ. "ಎಲ್ಲರೂ ಸೇರಿ ಡೆಂಗ್ಯೂ ಸೋಲಿಸೋಣ"ಎಂದು ಸಾರ್ವಜನಿಕರಿಗೆ ಕರೆ ನೀಡಿದರು. ಶುದ್ಧ ನೀರು ಸೇವನೆ ಮಾಡಬೇಕು ಬಿಸಿ ಊಟ ಸೇವನೆ ವೈಯಕ್ತಿಕ ಸ್ವಚ್ಛತೆ ಆದ್ಯತೆ ನೀಡಬೇಕು ಎಂದರು. ಆರೋಗ್ಯ ಇಲಾಖೆಯ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಮನೆ ಮನೆ ಭೇಟಿ ನೀಡಿ ಸೊಳ್ಳೆ ಉತ್ಪತ್ತಿ ತಾಣಗಳ ಸಮೀಕ್ಷೆ ಪರೀಕ್ಷೆ ಮಾಡಿ ಜಾಗೃತಿ ಮೂಡಿಸಿದರು. "ಆರೋಗ್ಯ ಅರಿವು ಜಾಗೃತಿ" ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗ್ರಾಮದ ಮುಖಂಡರು, ಯುವಕರು ಭಾಗವಹಿಸಿದ್ದರು.

“ಬೆಲೆ ಕಟ್ಟಲಾಗದ ಬಳಪ ಹಿಡಿದು ಭಗವಂತ”

(ಗುರು ಪೂರ್ಣಿಮೆಯ ವಿಶೇಷ)



ಅಕ್ಷರ ಕಲಿಸಿ ಬದುಕು ತೋರಿಸಿದವರು
ಮಾರ್ಗದರ್ಶನ ಮಾಡಿ ಹರಸಿ ಹಾರೈಸಿದವರು
ಪರ ಊರಿನಿಂದ ಬಂದು ಬೋಧಿಸಿದವರು
ಸ್ವಾರ್ಥವಿಲ್ಲದ ನಿಸ್ವಾರ್ಥ ಮನದ ಗುರು ದೇವರು

ಬೆಳೆಸಿದರು ಅಜ್ಞಾನದಿಂದ ಜ್ಞಾನದ ಕಡೆಗೆ
ಸ್ಫೂರ್ತಿ ತುಂಬಿದರು ಪ್ರತಿ ಮಗುವಿನ ಸಾಧನೆಗೆ
ಪೂಜಿಸಿ ಬಳಪ ಹಿಡಿದ ಭಗವಂತನಿಗೆ
ಪ್ರೀತಿ ಮಮತೆಯ ಎರಡನೇ ತಾಯಿಗೆ

ತಮ್ಮ ಮಕ್ಕಳಂತೆ ಪ್ರೀತಿಸಿ ಮುದ್ದಿಸಿದರು
ಏನು ಇಲ್ಲದ ಮೆದುಳಿಗೆ ಜ್ಞಾನ ತುಂಬಿದರು
ನನ್ನಂತೆ ನನ್ನ ಶಿಷ್ಯ ಬೆಳೆಯಬೇಕು ಎಂದರು
ಮಕ್ಕಳ ಪಾಲಿಗೆ ಬೆಲೆ ಕಟ್ಟಲಾಗದ ಭಗವಂತನಾದರು

ಸೋತಾಗ ಬೆನ್ನು ತಟ್ಟಿ ಪ್ರೋತ್ಸಾಹಿಸಿದವರು
ಗೆದ್ದಾಗ ಶಿಷ್ಯರಿಗಿಂತ ಮುಂಚೆ ಖುಷಿ ಪಟ್ಟವರು
ಆರಕ್ಕೇಳದೆ ಮೂರಕ್ಕಿಳಿಯದೆ ಬದುಕು ಸಾಗಿಸಿದವರು
ಜೀವನ ಪೂರ್ತಿ ಸರಳ ಜೀವನ ನಡೆಸಿದವರು

ಗುರುದೇವ ನಿನ್ನ ನಂಬಿದರೆ ಮೋಸವಿಲ್ಲವಯ್ಯ
ಕಣ್ಣಿಗೆ ಕಾಣುವ ದೇವರು ನೀನಯ್ಯ
ಅಕ್ಷರ ಕ್ರಾಂತಿಗೆ ರೂವಾರಿ ನೀವಯ್ಯ
ನೀವಿಲ್ಲದೆ ಜಗವು ಶೂನ್ಯ ನಂಬಯ್ಯ

* * *

ಶ್ರೀ ಮುತ್ತು ಯ. ವಡ್ಡರ

ಶಿಕ್ಷಕರು

ಹೆಚ್.ಪಿ.ಎಸ್ ಹಿರೇಮಳಗಾವಿ ಬಾಗಲಕೋಟ

ಮೊ: 9845568484

ಜಲಧೂತ ಜಾಗೃತಿ ಜಾಥಾ ಕಾರ್ಯಕ್ರಮ

ಕಲಕೇರಿ : ಇಂದು ದಿನಾಂಕ 20/07/2024 ರಂದು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕಲಕೇರಿ & ಸರ್ಕಾರಿ ಹಿರಿಯ ಹೆಣ್ಣು ಮಕ್ಕಳ ಶಾಲೆ ಕಲಕೇರಿ & ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕಲಕೇರಿ ಶಾಲೆಯಲ್ಲಿ ಸರ್ಕಾರದ ಆದೇಶದಂತೆ ಮಳೆ ನೀರಿನ ಹನಿ ಹಾಗೂ ಮಳೆ ನೀರಿನ ಉಪಯೋಗ ಮತ್ತು ಮಳೆ ನೀರು ಕೊಯ್ಲಿಗೆ ಹೇಗೆ ಅಳವಡಿಸಿಕೊಳ್ಳಬೇಕು,ಇದರಿಂದ ಏನು ಉಪಯೋಗ ಹಾಗೂ ನೀರು ನಮ್ಮ ಜೀವನದಲ್ಲಿ ಎಷ್ಟು ಪ್ರಾಮುಖ್ಯತೆ ನೀರಿಲ್ಲದೆ ಪ್ರತಿ ಜೀವಿಯು ಬದುಕಲಾರದು ಎಂಬ ಸಂದೇಶವನ್ನು ಊರಿನ ಪ್ರಮುಖ ಬೀದಿಗಳಲ್ಲಿ ಪ್ರಭಾತ ಪೇರಿ ಮಾಡುವುದ ರೊಂದಿಗೆ ಜಲಧೂತ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಎಸ್ ಎಲ್ ನಾಯ್ಕೋಡಿ, ಮುಖ್ಯ ಗುರುಗಳಾದ ಶ್ರೀ ಜೆ ಬಿ ಕುಲಕರ್ಣಿ, ಎಸ್ ಬಿ ಪಡಶೆಟ್ಟಿ, ಶ್ರೀ ಡಿ ಬಿ ಅಡಿಕಿ, ಶಾಲೆಯ ಸಿಬ್ಬಂದಿ ವರ್ಗ, ಎಸ್ ಡಿ ಎಮ್ ಸಿ ಅಧ್ಯಕ್ಷರು ಹಾಗೂ ಸದಸ್ಯರು ಮುದ್ದು ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ

ಸಾಮಾಜಿಕ ಲೆಕ್ಕ ಪರಿಶೋಧನೆ ಪೂರ್ವಭಾವಿ ಸಭೆ

ಕೊಟ್ಟೂರು : ಕೊಟ್ಟೂರು ತಾಲೂಕಿನ ಹ್ಯಾಳ್ಯಾ ಗ್ರಾಮ ಪಂಚಾಯಿತಿಯಲ್ಲಿ 20 ಜುಲೈ 2024 ಶನಿವಾರ 2023–24 ನೇ. ಸಾಲಿನ ನರೇಗಾ ಹಾಗೂ 15ನೇ ಹಣಕಾಸು ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳನ್ನು ಸಾಮಾಜಿಕ ಲೆಕ್ಕ ಪರಿಶೋಧನೆ ತಂಡವು ಪೂರ್ವ ಬಾವಿ ಸಭೆಯನ್ನು ನಡೆಸಿದರು. ಸದರಿ ಕಾರ್ಯಕ್ರಮದಲ್ಲಿ

ಗ್ರಾ.ಪಂ ಅಧ್ಯಕ್ಷರು ಶ್ರೀಮತಿ ಡಿ ಹಾಲಮ್ಮ ಉಪಾಧ್ಯಕ್ಷ ಶ್ರೀ ಡಿ ನಾಗೇಶ ಮತ್ತು ಸರ್ವ ಸದಸ್ಯರು, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಸುಭಾಶ್ ಚಂದ್ರ ಗೌಡ ಮತ್ತು ಗ್ರಾಮ ಸಂಪನ್ಮೂಲ ವ್ಯಕ್ತಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿ ಹೆಚ್ ಎಂ ಗಂಗಾಧರ, ಗ್ರಾಮ ಪಂಚಾಯಿತಿ ಗ್ರಂಥಾಪಾಲಕ ಬಿ ಲೋಕೇಶ್ ಇವರೆಲ್ಲರೂ ಸಭೆಯಲ್ಲಿ ಹಾಜರಿದ್ದರು. ಮತ್ತು ಗಣಕ ಯಂತ್ರ ನಿರ್ವಾಹಕರು ಎಂ ಸ್ವತಂತ್ರ ಕುಮಾರ ಇವರಿಂದ ವಂದನಾರ್ಪಣೆ ಮಾಡಿದರು.

ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ ಕೊಟ್ಟೂರು

ಸದೃಢವಾದ ಶಾಂತಿಯ ತೋಟ ಕಟ್ಟಲು ಶ್ರಮಿಸೋಣ: ಸಲೀಂ

ಕೊಪ್ಪಳ : ನಾವೆಲ್ಲರೂ ಒಂದಾಗಿ ನಮ್ಮ ದೇಶವನ್ನು ಕಟ್ಟಲು ಒಂದು ಸದೃಢವಾದ ಶಾಂತಿಯ ತೋಟ ವನ್ನು ಕಟ್ಟಲು ಶ್ರಮಿಸೋಣ ಎಂದು ಜಮಾತೆ ಇಸ್ಲಾಮಿ ಹಿಂದ್ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ಅಖಿಲ ಭಾರತ ಸದ್ಭಾವನ ಮಂಚ್ ನ ರಾಷ್ಟ್ರೀಯ ಸದಸ್ಯರಾದ ಪ್ರೊಫೆಸರ್ ಮೊಹಮ್ಮದ್ ಸಲೀಂ ಹೇಳಿದರು

ಅವರು ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕೊಪ್ಪಳ ಜಮಾತೆ ಇಸ್ಲಾಮಿ ಹಿಂದ್ ಏರ್ಪಡಿಸಿದ ಸದ್ಭಾವನಾ ಸಭೆ ಮತ್ತು ಸೌಹಾರ್ದ ಕೂಟ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು

ಮುಂದುವರೆದು ಮಾತನಾಡಿ ಸಮಾನತಾ ಮತ್ತು ಸಮವೃತ್ತ, ನ್ಯಾಯ ಅನ್ಯಾಯ ನ್ಯಾಯವಿಲ್ಲದೆ ಶಾಂತಿ ಲಭಿಸುದಿಲ್ಲ, ಸಹೋದರತ್ವ ಮತ್ತು ಸನ್ಮಾನ, ಸಂವಾದ ಮುಖಾಂತರ ನಾವು ಪರಸ್ಪರ ಸೌಹಾರ್ದತೆ ಬೆಳೆಸಿಕೊಳ್ಳಬೇಕು ಉತ್ತಮ ಕಾರ್ಯ ಚಟುವಟಿಕೆ ಮಾಡುವುದರ ಜೊತೆಗೆ

ಸಮಾಜಕ್ಕೆ ಉತ್ತಮ ರೀತಿಯ ಸೇವೆ ಸಲ್ಲಿಸಬೇಕು ಎಂದರು ,ಇಂದು ಸಜ್ಜನರು ಗರಿಷ್ಠ ಪ್ರಮಾಣದಲ್ಲಿ ಇದ್ದರೂ ಕೂಡ ದುರ್ಜನರ ಪ್ರಮಾಣ ಕಡಿಮೆ ಇದ್ದರೂ ಕೂಡ ಅವರ ಸಂಘಟನಾತ್ಮಕ ಪ್ರಯತ್ನ ದಿಂದ ಸಫಲರಾಗಿದ್ದಾರೆ, ನಾವುಗಳು ಸಜ್ಜನರು ಮೂಕ ಪ್ರೇಕ್ಷಕರಾಗಿ ಇದ್ದರೆ ಖಂಡಿತ ಲಾಭವನ್ನು ದುರ್ಜನರಿಗೆ ಆಗುತ್ತದೆ ನಾವೆಲ್ಲರೂ ಒಂದಾಗಿ ನಮ್ಮ ದೇಶವನ್ನು ಕಟ್ಟಲು ಒಂದು ಸದೃಢ ಶಾಂತಿಯ ತೋಟವನ್ನು ಕಟ್ಟಲು ಶ್ರಮಿಸೋಣ ಎಂದವರು ಕೋಮು ಸೌಹಾರ್ದತೆ ರಾಷ್ಟ್ರೀಯ ಭಾವೈಕ್ಯತೆ ಬೆಳೆಸಿಕೊಂಡು ಪರಸ್ಪರ ಉತ್ತಮ ಬಾಂಧವ್ಯ ಬೆಳೆಸಿಕೊಂಡು ಜೀವನ ಸಾಗಿಸಿದರೆ ಬದುಕು ಸಾರ್ಥಕ ಎಂದು ಅಖಿಲ ಭಾರತ ಸದ್ಭಾವನ ಮಂಚ್ನ ರಾಷ್ಟ್ರೀಯ ಸದಸ್ಯರಾದ ಮೊಹಮ್ಮದ್ ಸಲೀಂ ಹೇಳಿದರು. ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಮೊಹಮ್ಮದ್ ಕುಯಿಠ ಮಾತನಾಡಿ ಇಂದಿನ ಸಂದರ್ಭದಲ್ಲಿ ಸುಳ್ಳನ್ನು ಪದೇ ಪದೇ ಹೇಳಿ ನಿಜ ಮಾಡುವ ಸಂದರ್ಭ ಉಂಟಾಗಿದ್ದು ನಾವು ಒಗ್ಗಟ್ಟಾಗಿ ಸುಳ್ಳನ್ನು ಸೋಲಿಸಬೇಕಾಗಿದೆ ವಾಸ್ತವಿಕತೆ ತಿಳಿಯುವ ಮತ್ತು ತಿಳಿಸುವ ಕೆಲಸ ನಡೆಯಬೇಕಾಗಿದೆ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವವನು ನಮ್ಮ ನಾಯಕ ಆದರೆ ದುರಾದೃಷ್ಟ ವಾಗಿ ಸಮಸ್ಯ ಸೃಷ್ಟಿಸುವನು ನಾಯಕನಾಗಿದ್ದಾನೆ ಇದು ಒಳ್ಳೆಯ ಬೆಳವಣಿಗೆ ಅಲ್ಲ ಮನುಷ್ಯನಿಗೆ ಬೇರ್ಪಡಿಸುವುದು ಯಾವ ಧರ್ಮ ಹೇಳಿಲ್ಲ ಸಮಾಜದಲ್ಲಿನ ಕೆಡುಕು ಹೋಗಲಾಡಿಸಲು ಪ್ರತಿಯೊಬ್ಬರು ಶ್ರಮಿಸಬೇಕು ಸಮಾಜದ ಸಮಾರಸ್ಯ ಸೌಹಾರ್ದತೆ ನಮ್ಮ ಊರು ನಮ್ಮವರು ಎಂಬ ಅಭಿಮಾನ ರೂಡಿಸಿಕೊಳ್ಳಬೇಕು ಪರಸ್ಪರ ಸೌಹಾರ್ದತೆಯ ಬದುಕು ನಮ್ಮದಾಗಬೇಕು ಎಂದು ಮೊಹಮ್ಮದ್ ಕುಯಿಠ, ಅಭಿಪ್ರಾಯ ಪಟ್ಟರು

ವೇದಿಕೆ ಮೇಲೆ ಜಮಾತೆ ಇಸ್ಲಾಮಿ ಹಿಂದ ಕೊಪ್ಪಳದ ಅಧ್ಯಕ್ಷರಾದ ಹಿದಾಯತ್ ಅಲಿ ವಲಯ ಸಂಚಾಲಕರಾದ ರಾಯಚೂರಿನ ಮೌಲಾನ ಅನ್ವರ್ ಪಾಷಾ ಉಮರಿ ಜಿಲ್ಲಾ ಸಂಚಾಲಕ ದಿಲಾವರ್ ಅಂಬರ್ ಖಾನ್ ಪಾಲ್ಗೊಂಡಿದ್ದು ಆರಂಭದಲ್ಲಿ ಮಹಮ್ಮದ್ ಫಹಿಮುದ್ದೀನ್ ಕುರಾನ್ ಪಠಣ ಮಾಡಿ ಅದರ ಕನ್ನಡ ಅನುವಾದ ಸಭಿಕರಿಗೆ ತಿಳಿಸಿದರು ಅಭಿಯಂತ ಹಾಗೂ ಜಮಾತೆ ಇಸ್ಲಾಮಿ ಹಿಂದನ ಸದಸ್ಯರಾದ ತಾಜುದ್ದೀನ್ ರವರು ಆರಂಭದಲ್ಲಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

ದುಷ್ಕರ್ಮಿಗಳಿಂದ ಗುಡಿಸಲಿಗೆ ಬೆಂಕಿ. ತಾಯಿ ಮಗಳು ಸಜೀವ ದಹನ

ಸಂತ್ರಸ್ತರಿಗೆ ವೆಲ್ಫೇರ್ ಪಾರ್ಟಿಯಿಂದ ಸಾಂತ್ವನ

ಮುಧೋಳ : ಮುಧೋಳ ತಾಲೂಕಿನ ಬೆಳಗಲಿ ಗ್ರಾಮದಲ್ಲಿ ದುಷ್ಕರ್ಮಿಗಳು ಗುಡಿಸಲಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರಿಂದ ತಾಯಿ ಮಗು ಸಜೀವ ದಹನವಾಗಿರುವ ಘಟನೆ ನಡೆದಿದ್ದು ಸ್ಥಳಕ್ಕೆ ವೆಲ್ಫೇರ್ ಪಾರ್ಟಿ ಬಾಗಲಕೋಟೆ ಜಿಲ್ಲಾ ನಾಯಕರು ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ತಿಳಿಸಿದ್ದಾರೆ., ಇದೊಂದು ಭಯಾನಕ ಅಮಾನವೀಯ ಘಟನೆಯಾಗಿದ್ದು ಇಂತಹ ಘಟಕಗಳು ಉತ್ತರದ ರಾಜ್ಯಗಳಲ್ಲಿ ಕೇಳಿ ಬರುತಿತ್ತು, ಇದೀಗ ನಮ್ಮ ಜಿಲ್ಲೆಯಲ್ಲಿ ಇಂತಹ ಘಟನೆ ನಡೆದಿರುವುದು ಅಪಾಯಕಾರಿ. ಆದ್ದರಿಂದ ಸರಕಾರ ತನ್ನ ಅಧಿಕಾರ ಬಳಸಿ ಕೂಡಲೇ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ನಿಯೋಗವು ಸರಕಾರವನ್ನು ಆಗ್ರಹಿಸಿತು. ನಿಯೋಗದಲ್ಲಿ ಜಿಲ್ಲಾ ಅಧ್ಯಕ್ಷರು ಇರ್ಫಾನ್ ಸಿಲೆದಾರ್, ಜಿಲ್ಲಾ ಕಾರ್ಯದರ್ಶಿ ಬಾವಾ ಖಾನ್ ಮತ್ತು ಸದಸ್ಯರು ಪಾಲ್ಗೊಂಡಿದ್ದರು.

ಉಚಿತ ಆರೋಗ್ಯ ಶಿಬಿರಗಳು ಬಡವರಿಗೆ ವರದಾನ: ಮಹಾಂತೇಶ ಹಿಟ್ಟಿನಮಠ

ಮಹಾಲಿಂಗಪುರ : ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಸಮಾಜದಲ್ಲಿನ ಬಡವರಿಗೆ, ನಿರ್ಗತಿಕರಿಗೆ ವರದಾನವಾಗಿವೆ ಎಂದು ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಹೇಳಿದರು.

ರವಿವಾರ ಪಟ್ಟಣದ ಪ್ರಗತಿ ಪ್ರೌಢಶಾಲೆಯಲ್ಲಿ ಆರ್ಎನ್ಸಿ ಆಸ್ಪತ್ರೆ ಬಾಗಲಕೋಟ ಮತ್ತು ಸ್ಥಳೀಯ ಜಂಗಮ ಕ್ಷೇಮಾಭಿವೃದ್ಧಿ ಸಂಘ ಸಹಯೋಗದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಜೀವನದ ಮುಖ್ಯ ಉದ್ದೇಶ ಆರೋಗ್ಯವಂತ ಜೀವನ ಹಾಗೂ ಪರೋಪಕಾರ ಮಾಡುವದಾಗಿದೆ. ಸಮಾಜ, ಸಂಘ ಸಂಸ್ಥೆಗಳು ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿ ಉಚಿತ ಆರೋಗ್ಯತಪಾಸಣೆ ಅಥವಾ ಚಿಕಿತ್ಸೆನೀಡುವ ಮೂಲಕ ಬಡವರ ಆರೋಗ್ಯ ಸುಧಾರಣೆಗೆ ಶ್ರಮಿಸಬೇಕಾಗಿದೆ. ಮಹಾಲಿಂಗಪುರದ ಜಂಗಮ ಸಮಾಜ ಕಾರ್ಯ ಕೈಗೊಂಡಿರುವುದು ಶ್ಲಾಘನೀಯ. ಪ್ರತಿ ವರ್ಷವೂ ಇಂತಹ ಪುಣ್ಯದ ಕಾರ್ಯಗಳು ನಡೆಯಲಿ ಎಂದರು. ಪ್ರಗತಿ ಶಿಕ್ಷಣ ಸಂಸ್ಥೆ ಕಾರ್ಯಾಧ್ಯಕ್ಷ ಬಸವರಾಜ ಮಾನೆ ಮಾತನಾಡಿದರು. ಆರೋಗ್ಯ ಶಿಬಿರದಲ್ಲಿ ನರರೋಗ ತಜ್ಞ ಡಾ.ರಾಕೇಶ ಎ.ವಿ, ಎಲವು ಕೀಲುಗಳ ತಜ್ಞ ಡಾ.ಸಚಿನ್ ಕಟ್ಟಿ, ಕಿಡ್ನಿ ತಜ್ಞ ಡಾ.ಗಂಗಾಧರ ಚಿರಾಗ ಕಾರ್ಯ ನಿರ್ವಹಿಸಿದರು. ಬಿಪಿ, ಶುಗರ್, ನರರೋಗ, ಕಿಡ್ನಿ, ಎಲವು–ಕೀಲು ಮತ್ತು ಇನ್ನಿತರ ರೋಗಗಳನ್ನು ತಪಾಸಣೆಗೈದು ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸು ಮಾಡಿದರು. ಶಿಬಿರದಲ್ಲಿ 200 ಕ್ಕೂ ಹೆಚ್ಚು ರೋಗಿಗಳ ಆರೋಗ್ಯ ತಪಾಸಣೆ ಮಾಡಲಾಯಿತು. ಉಚಿತ ಚಿಕಿತ್ಸೆ ನೀಡಿದ ವೈದ್ಯರಿಗೆ ಜಂಗಮ ಸಮಾಜದಿಂದ ಸನ್ಮಾನಿಸಲಾಯಿತು.

ಸ್ಥಳೀಯ ಜಂಗಮ ಸಮಾಜ ಅಧ್ಯಕ್ಷ ಗುರುಪಾದಯ್ಯ ಚಟ್ಟಿಮಠ, ಡಾ.ಸಿ.ಎಂ.ವಜ್ಜರಮಟ್ಟಿ, ವಿ.ಆಯ್.ಪಂಚಕಟ್ಟಿಮಠ, ಮಹಾಂತೇಶ ಮನ್ನಯ್ಯನವರಮಠ, ಬಸವರಾಜ ಅಯ್ಯನಗೌಡರ, ಮೃತ್ಯುಂಜಯ ಮಠಪತಿ, ಜಗದೀಶ ಮಠಪತಿ, ಈರಣ್ಣ ಚಟ್ಟಿಮಠ, ಸದಾಶಿವ ಹಿರೇಮಠ ಸೇರಿದಂತೆ ಹಲವರು ಇದ್ದರು.

ಗುರುಲಿಂಗಯ್ಯ ಮಠಪತಿ ಸ್ವಾಗತಿಸಿದರು. ಜಂಗಮ ಸಮಾಜದ ಯುವ ವೇದಿಕೆ ಅಧ್ಯಕ್ಷ ಸಾಗರ ಮಠದ ಪ್ರಾಸ್ತಾವಿಕವಾಗಿ ಮಾತನಾಡಿದರು. ದರು. ಚೆನ್ನಯ್ಯ ಮಸಗುಪ್ಪಿಮಠ ನಿರೂಪಿಸಿದರು. ಎಂ.ಎಸ್.ಮಠ ವಂದಿಸಿದರು.

ಕಾಲಪೆಟ್ಟಿಗೆಯ ಹಾರ್ಮೋನಿಯಂ ಕಲಾವಿದ ಸದಾಶಿವ ತೇಲಿ

● ಕಿರಣ ಶ್ರೀಶೈಲ ಆಳಗಿ

ರಬಕವಿ–ಬನಹಟ್ಟಿ : ಬನಹಟ್ಟಿಯ ಸದಾಶಿವ ತೇಲಿ ಬಹುಮುಖ ಪ್ರತಿಭೆಯ ಕಲಾವಿದರು. ನಟನೆ, ನಿರ್ದೇಶನ, ಭಜನಾ ಪದ ಹಾಡುಗಾರಿಕೆಯ ಜೊತೆಗೆ ತಾಳ ವಾದನ, ದಮಡಿ, ಡಪ್ಪಗಳನ್ನು ನುಡಿಸುವುದರ ಜೊತೆಗೆ ನಮ್ಮಿಂದ ದೂರವಾಗುತ್ತಿರುವ ಕಾಲಪೆಟ್ಟಿಗೆಯ ಹಾರ್ಮೋನಿಯಮ್ ನ ಬೆರಳೆಣಿಕೆ ಕಲಾವಿದರಲ್ಲಿ ಒಬ್ಬರಾಗಿ ಅವರು ಎಲ್ಲರ ಗಮನ

ಕನ್ನಡ ಭಾಷೆ, ಸಾಹಿತ್ಯಕ್ಕಾಗಿ ವೆಂಕಟರಾವ ಜೀವನವನ್ನೇ ಮುಡುಪಾಗಿಟ್ಟಿದ್ದರು

ಧಾರವಾಡ : ಮುಂಬಯಿ ಪ್ರಾಂತ್ಯದಲ್ಲಿದ್ದ ಕನ್ನಡ ಪ್ರದೇಶಗಳಲ್ಲಿ ಮರಾಠಿ ಭಾಷೆಯ ಪ್ರಾಬಲ್ಯ ಹೆಚ್ಚಾದ ಸಂದರ್ಭದಲ್ಲಿ ವೆಂಕಟರಾವ ಅವರು 1906 ರಲ್ಲಿ ವಾಗ್ಭೂಷಣ ಎಂಬ ಪತ್ರಿಕೆ ಆರಂಭಿಸಿದರು. ತಮ್ಮ ವಕೀಲವೃತ್ತಿಯನ್ನುತೊರೆದುಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿದರು. 1922 ನವೆಂಬರ್ 4 ರಂದು ಜಯಕರ್ನಾಟಕ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಮೂಲಕ ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಕನ್ನಡಭಾಷೆ,ಸಾಹಿತ್ಯಕ್ಕಾಗಿಆಲೂರುವೆಂಕಟರಾಯರು ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು ಎಂದು ಶಾಲಾ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಈಶ್ವರ ನಾಯಕ ಅವರು ಹೇಳಿದರು.

ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸಾಂಸ್ಕೃತಿಕಭವನದಲ್ಲಿಆಯೋಜಿಸಲಾಗಿದ್ದಸುವರ್ಣ ಕರ್ನಾಟಕ 50 ರ ಸಂಭ್ರಮಾಚರಣೆ ಮತ್ತು ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಅವರ 144ನೇ ಜನ್ಮ ದಿನಾಚರಣೆಯ ಅಂಗವಾಗಿ ಆಲೂರು ವೆಂಕಟರಾವ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತಾಡಿದರು.

ವೆಂಕಟರಾವ ಕನ್ನಡಿಗರ ನಿರಭಿಮಾನದ ಬಗ್ಗೆ ಮರುಕ ಪಡುತ್ತಿದ್ದರು. ಉದ್ಯಮಶೀಲತೆ ಬೆಳೆಸುವ ಮೂಲಕ ಸ್ವಾವಲಂಬಿ ಬದುಕನ್ನು ಕನ್ನಡಿಗರು ಕಟ್ಟಿಕೊಳ್ಳಬೇಕು ಎಂಬ ವಿಚಾರವಾಗಿ ಪ್ರಾರಂಭದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದರು. ಆದರೆ ಬ್ರಿಟಿಷರ ಅಸಹಕಾರದಿಂದ ಯಶಸ್ಸು ಕಾಣಲಿಲ್ಲ. ರೈತರ ಅಭಿವೃದ್ಧಿಗಾಗಿ ರೈತ ಸಂಘಗಳನ್ನು ಸ್ಥಾಪಿಸಿದರು ಎಂದು ಅವರು ಮಾತನಾಡಿದರು.

ಕಾರ್ಯಕ್ರಮದಅಧ್ಯಕ್ಷತೆಯನ್ನುವಹಿಸಿಮಾತನಾಡಿದ, ಕವಿವಿ ವಿಶ್ರಾಂತಿ ಕುಲಪತಿ ಡಾ. ಪ್ರಮೋದ ಗಾಯಿ ಕರ್ನಾಟಕ ಎಂಬ ಪದವನ್ನು ತಂದು ಕೊಟ್ಟವರು ಆಲೂರು ವೆಂಕಟರಾವ. ವಿದ್ಯಾರ್ಥಿಗಳು ಇವರ ಭಾವ ಚಿತ್ರವನ್ನು ನೋಡಿರಬಹುದು ಆದರೆ ಇವರ ಜೀವನ, ಸಾಧನೆಗಳ ಬಗ್ಗೆ ಯಾರಿಗೂ ಗೊತ್ತಿರುವುದಿಲ್ಲ, ಇವರು ಬರೆದಂತಹ ಪುಸ್ತಕ, ಸಾಹಿತ್ಯಗಳನ್ನು ಓದಿದರೆ ಇವರ ಸಂಪೂರ್ಣ ಜೀವನ ಚರಿತ್ರೆಯನ್ನು ತಿಳಿಯಬಹುದು ಎಂದು ಹೇಳಿದರು.

ಆಲೂರು ವೆಂಕಟರಾವ ಅವರು ಪತ್ರಿಕಾ ರಂಗ–ಕ್ಕೆ ನೀಡಿದ ಕೊಡುಗೆ ಮತ್ತು ಪತ್ರಿಕಾ ರಂಗದಲ್ಲಿ ಭಾಷೆಯ ಬಳಕೆಯ ಕುರಿತು ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ನಿವೃತ್ತಿ ಸಂಪಾದಕ ಮನೋಜಗೌಡ ಪಾಟೀಲ ಅವರು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ದೀಪಕ ಆಲೂರು, ವೆಂಕಟೇಶ ದೇಸಾಯಿ, ಪಾರ್ವತಿ ಹಾಲಭಾವಿ ದಂಪತಿಗಳು ಮತ್ತು ವಿವಿಧ ಗಣ್ಯ ವ್ಯಕ್ತಿಗಳು ಹಾಗೂ ಶಾಲೆಯ ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಸೋಲಲ್ಲಿಯೂ ಗೆಲುವು ಕಾಣುವ ಛಲ ಇರಬೇಕು: ಅಂಜುಮನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ

ಧಾರವಾಡ: ವಿದ್ಯಾರ್ಥಿ ಬದುಕಿನಲ್ಲಿ ಸೋಲು ಒಪ್ಪದೆ, ಸೋಲಲ್ಲಿಯೂ ಗೆಲುವು ಕಾಣುವ ಛಲ ಇರಬೇಕು. ಸತತ ಅಧ್ಯಯನ, ನಿರಂತರ ಪರಿಶ್ರಮ ಹಾಗೂ ಪ್ರಯತ್ನ ಇದ್ದಾಗ ಸಾಧನೆ ಹಾದಿಯೂ ಸುಲಭ ಎಂದು ಅಂಜುಮನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ಹೇಳಿದರು.

ಅಂಜುಮನ್ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಸಹಯೋಗದಲ್ಲಿ ನಗರದ ವಿದ್ಯಾವರ್ಧಕ ಸಂಘದ ನಾಡೋಜ ಡಾ.ಪಾಟೀಲ ಪುಟಪ್ಪ ಸಭಾಂಗಣದಲ್ಲಿ ಶನಿವಾರ ಕಾಲೇಜಿನ 38ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದರು.

ದುಶ್ಚಟಗಳಿಗೆ ಬಲಿಯಾಗಿ ಬಂಗಾರದಂತ ವಿದ್ಯಾರ್ಥಿ ಜೀವನ ಹಾಳು ಮಾಡಿಕೊಳ್ಳದೆ, ಉಸಿರು ನಿಂತರೂ, ಹೆಸರು ಅಳಿಯದ ಸಾಧನೆ ಮಾಡುವ ಮೂಲಕ ಕಲಿತ ಸಂಸ್ಥೆ, ಕಲಿಸಿದ ಗುರು ಮತ್ತು ಪಾಲಕರಿಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ಅಂಜುಮನ್ ಸಂಸ್ಥೆಯಲ್ಲಿ ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಖುಷಿಯ ಸಂಗತಿ. ಇಲ್ಲಿ ಕಲಿತು ಮಕ್ಕಳು ಸಾಧನೆ ಮಾಡಿದ ಮಕ್ಕಳು ಸಂಸ್ಥೆಯ ಹೆಸರು ಹೇಳಲು ಮುಜುಗರಪಡುತ್ತಾರೆ ಎಂದು ಬೇಸರಿಸಿದರು.

ಸಂಸ್ಥೆಯಲ್ಲಿ ಕಲಿತು, ಉನ್ನತ ಹುದ್ದೆಗೆ ಹೋದ ಯಾವುದೇ ಜಾತಿ, ಧರ್ಮದ ವಿದ್ಯಾರ್ಥಿ ಅಂಜುಮನ್ ಸಂಸ್ಥೆಯ ಹೆಸರು ಮರೆಯಬಾರದು ಎಂದರಲ್ಲದೇ, ಮಾನವೀಯ ಮೌಲ್ಯಗಳೊಂದಿಗೆ ಉತ್ತಮ ನಾಗರಿಕರಾಗಿ ಬಾಳುವಂತೆ ಕರೆ ನೀಡಿದರು.

ಕರ್ನಾಟಕ ಉರ್ದು ಅಕ್ಯಾಡೆಮಿ ಅಧ್ಯಕ್ಷ ಮಹ್ಮದ್ ಅಲಿ ಖಾಜಿ ಮಾತನಾಡಿ, ಉರ್ದು ಜಾಗತಿಕ ಭಾಷೆ. ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾನಿ ಅಂಥ ಮಹಾನ್ ನಾಯಕರು ಉರ್ದು ಭಾಷೆ ಅಧ್ಯಯನ ಮಾಡಿದ್ದಾಗಿ ಹೆಮ್ಮೆ ವ್ಯಕ್ತಪಡಿಸಿದರು.

ಅಲಿಗಡ ವಿವಿಯಲ್ಲಿ ಉರ್ದು ಭಾಷೆಯಲ್ಲಿಯೇ ರಾಮಾಯಣ, ಮಹಾಭಾರತ ಬೋಧಿಸಲಾಗುತ್ತಿದೆ. ಭವಿಷ್ಯದಲ್ಲಿ ಒಳ್ಳೆಯ ದಿನ ಬರಲಿವೆ. ವಿದ್ಯಾರ್ಥಿಗಳು ಪಾಲಕರ ಪರಿಶ್ರಮ ವ್ಯರ್ಥ ಮಾಡದೆ, ಸಾರ್ಥಕ ಮಾಡುವಂತೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ 2022–23ನೇ ಸಾಲಿನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಕುಮಾರಿ ಬಿಬಿ ಆಯೇಷಾ ಝುಕೇರ್ ಹುಸೇನ್ ರೇಷಮವಾಲೆ, ಕುಮಾರಿ ಸೌಂದರ್ಯ ಚಾವದಲ,ಕುಮಾರಿಅಸ್ಮಾ,ಕುಮಾರಿಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕುಮಾರ ದೀಪಕ್ ದುರ್ಗಣ್ಣವರ, ಕುಮಾರ ಉಸ್ಮಾನ್ ನೈಕರ, ಹಾಗೂ ಕುಮಾರ ದದಾಖಳಂದರ ಜಮಖಂಡಿ, ವಿದ್ಯಾರ್ಥಿಗಳಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಅಂಜುಮನ್ ಪದಾಧಿಕಾರಿಗಳಾದ ಡಾ.ಎಸ್.ಎಸ್.ಸರಗಿರೋ, ಮಹ್ಮದ್ ಶಫಿ ಕಳ್ಳಿಮನಿ, ಮಹ್ಮದ್ ರಫೀಕ್ ಶಿರಹಟ್ಟಿ, ಯಾಸೀನ್ ಹಾವೇರಿಪೇಟಿ, ಜನಾಬ ಖಲೀಲ್ ದಾಸನಕೊಪ್ಪ, ಪತ್ರಿಕೋದ್ಯಮದ ಮುಖ್ಯಸ್ಥ ಡಾ. ಎಸ್.ಎಸ್.ಅದೋನಿ ಇದ್ದರು.

ಕುಮಾರಿ ಸ್ವಲೇಹ ಕುರಾನ ಪಠಣ, ಪ್ರವೀಣ ಲಮಾಣಿ ಶ್ಲೋಕ ಪಠಣ, ಹಾಗೂ ಕುಮಾರಿ ಅಕ್ಸಾ ಮುಲ್ಲಾ ಮತ್ತು ಸಂಗಡಿಗರು ನಾಡಗೀತೆ ಹಾಡಿದರು. ಪ್ರಾಚಾರ್ಯ ಡಾ. ಎನ್.ಎಂ.ಮಕಾನದರ ಸ್ವಾಗತಿಸಿದರು. ಡಾ. ಐ.ಎಂ.ಮುಲ್ಲಾ

ಹಾಗೂ ಡಾ ಅಸ್ಮಾ ನಾಜ ಬಳ್ಳಾರಿ ವಾರ್ಷಿಕ ವರದಿ ವಾಚಿಸಿದರು ಡಾ ಎನ್ ಬಿ ನಾಲತವಾಡ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು, ಕುಮಾರಿ ಬಿಬಿ ಹಾಜರಾಸೋಮನಕೊಪ್ಪಹಾಗೂಕುಮಾರಿ ಮಹೇಕ್ ರೈಚೂರ್ ನಿರೂಪಿಸಿದರು ಹಾಗೂ ಕುಮಾರ ಝೈಡ್ ಕೆ ಚಿಕ್ಕೇರೂರ ವಂದಿಸಿದರು.

ಇಂದಿರಾ ಕ್ಯಾಂಟೀನ್‌ಗೆ ಭೂಮಿ ಪೂಜೆ

ನವಲಗುಂದ : ಆಶ್ರಯ ಯೋಜನೆ ಜಾರಿಯಲ್ಲಿದ್ದು, ಇನ್ನುಳಿದ ಬಡವರಿಗೆ ನಿವೇಶನ ಹಂಚಿಕೆ ಮಾಡಲು ಜಮೀನು ಖರೀದಿಸುವ ಸಲುವಾಗಿ ಸರ್ಕಾರ 5 ಕೋಟಿ 50ಲಕ್ಷ 80ಸಾವಿರ ಹಣ ಬಿಡುಗಡೆ ಮಾಡಿದೆ ಎಂದು ಶಾಸಕ ಹಾಗೂ ನಗರ ಆಶ್ರಯ ಸಮಿತಿ ಅಧ್ಯಕ್ಷರಾದ ಎನ್.ಹೆಚ್. ಕೋನರಡ್ಡಿ ಹೇಳಿದರು.

ನಗರದಲ್ಲಿ ಬಡವರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಉಪಹಾರ ಒದಗಿಸಲು ಪುರಸಭೆ ಎದುರಿಗೆ ಲೋಕೋಪಯೋಗಿ ಇಲಾಖೆಯ ಜಾಗೆಯಲ್ಲಿ ನೂತನವಾಗಿ "ಇಂದಿರಾ

ಕ್ಯಾಂಟಿನ" ಕಟ್ಟಡದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಮೂರು ತಿಂಗಳಲ್ಲಿ ಕಟ್ಟಡ ನಿರ್ಮಿಸಿ ಉಪಹಾರ ವಿತರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಜೀವನ ಪವಾರ, ಪ್ರಕಾಶ ಶಿಗ್ಲಿ, ಮಂಜು ಜಾಧವ, ಮೋದಿನ ಶಿರೂರ, ಸುರೇಶ ಮೇಟಿ, ಹನಮಂತ ವಾಲಿಕಾರ, ಶ್ರೀಮತಿ ಪದ್ಮಾವತಿ ಪೂಜಾರ, ಹುಸೇನಬಿ ಧಾರವಾಡ, ಆಶ್ರಯ ಸಮಿತಿ ಸದಸ್ಯರಾದ ಮದಾರಸಾಬ ಉಗರಗೋಳ, ಲಕ್ಷ್ಮಣ ಹಳ್ಳದ, ಕೆ.ಡಿ.ಪಿ ಸಮಿತಿ ಸದಸ್ಯರಾದ ಶ್ರೀಮತಿ ನಂದಿನಿ ಹಾದಿಮನಿ ನಗರದ ಪ್ರಮುಖರಾದ ಜಯಾ ಜಿನಗಾ, ಪಕ್ಕು ಯಡ್ರಾವಿ, ಬಸು ಈಟಿ, ಏಕನಾಥ ಜಾಧವ, ಮುತ್ತಣ್ಣ ಹೊನಕೇರಿ ಮುಖ್ಯಾಧಿಕಾರಿ ವೆಂಕಟೇಶ ನಾಗನೂರ, ಕ್ಷೇತ್ರ ಶಿಕ್ಷಣಾಧಿಕಾರಿ, ಮಲ್ಲಾಡ, ಗುತ್ತಿಗೆದಾರ ಸಂಸ್ಥೆಯಾದ ಎಕ್ಸ್‌ಎಲ್ ಪ್ರಿಕಾಸ್ಟ ಪರವಾಗಿ ಮಹಮ್ಮದ ಜೊಹಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಮುಡಾ ಹಗರಣದಲ್ಲಿ ಸಿಎಂ ನೇರಪಾತ್ರ

ಹುಬ್ಬಳ್ಳಿ : ಮುಡಾ ಹಗರಣದಲ್ಲಿ ಸಿಎಂ ಸಿದ್ಧರಾಮಯ್ಯನವರ ನೇರ ಪಾತ್ರವಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಆರೋಪಿಸಿದ್ದಾರೆ.

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಹಳ ವ್ಯವಸ್ಥಿತವಾಗಿ ಬೆಲೆ ಬಾಳುವ 14 ನಿವೇಶನಗಳನ್ನು ಗುಳುಂ ಮಾಡಿದ್ದು, ಸಿದ್ಧರಾಮಯ್ಯ ಓರ್ವ ಭ್ರಷ್ಟ ಮುಖ್ಯಮಂತ್ರಿ ಎಂದು ಟೀಕಿಸಿದರು.

ಕೂಡಲೇ ಸಿದ್ಧರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಹಾಗೂ ಅವರ ವಿರುದ್ಧ ಸೂಕ್ತ ತನಿಖೆಯಾಗಬೇಕು ಎಂದು ಜೋಶಿ ಆಗ್ರಹಿಸಿದರು.

ಈ ಹಗರಣದಲ್ಲಿ ಬಿಜೆಪಿಯವರಿದ್ದರೆ ಅವರ ಮೇಲೂ ಕ್ರಮವಾಗಲಿ ಎಂದವರು ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರ ಸಂಪೂರ್ಣವಾಗಿ ಸಿದ್ಧರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ ಅವರಿಗೆ ಗೊತ್ತಿದ್ದೇ ನಡೆದಿರುವ ಭ್ರಷ್ಟಾಚಾರ. ಇದು ಪ್ರತಿಶತ ನೂರರಷ್ಟು ಭ್ರಷ್ಟಾಚಾರ ಸರ್ಕಾರ ಎಂದು ಅವರು ನುಡಿದರು.

ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ: ಜಿ. ಪಲ್ಲವಿ ಅಧಿಕಾರಿಗಳಿಗೆ ಸೂಚನೆ

ಬೆಳಗಾವಿ : 'ಜಿಲ್ಲಾ ಕೇಂದ್ರಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳೇ ನಿಗಮದ ಕೆಲಸ ನಿರ್ವಹಿಸಬೇಕು. ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿನ ಯೋಜನೆಗಳ ಅರ್ಜಿಗಳ ಅಂಕಿ–ಅಂಶಗಳ ಮಾಹಿತಿ ಅಧಿಕಾರಿಗಳಿಗೆ ಇರಬೇಕು' ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಎಸ್.ಸಿ, ಎಸ್.ಟಿ, ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ನಿಗಮ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು, ಮಧ್ಯವರ್ತಿಗಳ ಹಾವಳಿ ಹೆಚ್ಚುತ್ತಿರುವ ಕುರಿತು ಕೆಲವು ದೂರುಗಳು ಬರುತ್ತಿವೆ. ಹಾಗಾಗಿ ಯಾವುದೇ ಮಧ್ಯವರ್ತಿಗಳು ಇಲ್ಲದೇ ಯೋಜನೆಗಳ ಸೌಲಭ್ಯ ಫಲಾನುಭವಿಗೆ ದೊರೆಯುವಂತೆ ಎಲ್ಲ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು' ಎಂದು ತಿಳಿಸಿದರು.

'ಇಲಾಖೆ ಯೋಜನೆಗಳಿಗಾಗಿ ಸಲ್ಲಿಸಿದ ಅರ್ಜಿಗಳ ಮಾಹಿತಿಯನ್ನು ಅಧಿಕಾರಿಗಳು ಕಡ್ಡಾಯವಾಗಿ ತರಬೇಕು. ಸಭೆಗೆ ಮುಂಚಿತವಾಗಿ ಎಲ್ಲಾರಿಗೂ ಸಭೆಯ ಬಗ್ಗೆ ಮಾಹಿತಿ ನೀಡಲಾಗಿದೆ' ಎಂದು ದಾಖಲಾತಿ ಒದಗಿಸದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ವಿವಿಧ ಯೋಜನೆಗಳಡಿ ಅರ್ಜಿ ಸಲ್ಲಿಸಿದ ಅಲೆಮಾರಿಗಳ, ಅರೆ ಅಲೆಮಾರಿ ಜನನಗಳ ಅಂಕಿ? ಅಂಶಗಳನ್ನು ಮಾಹಿತಿಗಾಗಿ ಸಂಗ್ರಹಿಸಬೇಕು. ಆಯ್ಕೆಯಾದ ಫಲಾನುಭವಿಗಳಿಗೆ ಕೆಲವು ಬ್ಯಾಂಕ್ ಸಾಲ ಸೌಲಭ್ಯ ನೀಡುವುದಿಲ್ಲ ಅಂತಹ ಬ್ಯಾಂಕ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಯಿಂದ ನಿರ್ದೇಶನ ನೀಡುವಂತೆ ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಳ್ಳಬೇಕು' ಎಂದು ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನವೀನ ಶಿಂತ್ರೆ ಹಾಗೂ ಇತರ ಅಧಿಕಾರಿಗಳು ಇದ್ದರು.

ಮಕ್ಕಳಿಗೆ ಡೆಂಗ್ಯೂ ಪ್ರತಿಬಂಧಕ ಲಸಿಕೆ ಹಾಕಿಸಿ

ಬೈಲಹೊಂಗಲ : ದಿನದಿಂದ ದಿನಕ್ಕೆ ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿವೆ. ಸಾವಿರಾರು ಮಕ್ಕಳು ಜ್ವರ ಶೀತ ನೆಗಡಿ, ಕೆಮ್ಮಿನ ಬಾಧೆಯಿಂದ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಡೆ–ಂಗ್ಯೂ ಜ್ವರ ವ್ಯಾಪಕವಾಗಿ ಹರಡಿ ಹಲವು ಕಡೆ ಸಾವುಗಳು ಕೂಡ ಸಂಭವಿಸುತ್ತಿವೆ. ಆದ್ದರಿಂದ 8 ವರ್ಷದ ಮೇಲಿನ ಮಕ್ಕಳಿಗೆ ಕಡ್ಡಾಯವಾಗಿ ಡೆಂಗ್ಯೂ ಪ್ರತಿಬಂಧಕ ಲಸಿಕೆ ಹನಿ ಹಾಕಿ ಮಂಜಾಗೃತೆ ವಹಿಸಬೇಕು ಎಂದು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಹೇಳಿದರು.

ತಾಲೂಕಿನ ಮಲ್ಲಮ್ಮನ ಬೆಳವಡಿಯ ಈಶಪ್ರಭು ಶಿಕ್ಷಣ ಸಂಸ್ಥೆಯ ರಾಣಿ ಮಲ್ಲಮ್ಮ ಸಂಯುಕ್ತ ಪದವಿ ಪೂರ್ವ ಮತ್ತು ಪ್ರೌಢ ಪ್ರಾಥಮಿಕ ಶಾಲೆಯ 8 ವರ್ಷದ ಮೇಲಿನ ಮಕ್ಕಳಿಗೆ ಡೆಂಗ್ಯೂ ಪ್ರತಿಬಂಧಕ ಲಸಿಕೆ ಹನಿ ನೀಡುವ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಈಜಿಪ್ಟಾ ಎನ್ನಲಾಗುವ ಮಾರಕ ಸೊಳ್ಳೆ ಕಡಿತದಿಂದ ಈ ಡೆಂಗ್ಯೂ ಖಾಯಿಲೆ ಹರಡುತ್ತಿದ್ದು ಮನೆ ಮುಂದೆ ಮತ್ತು ಇತರೆಡೆ ನೀರು ನಿಂತು ಗಲೀಜಾಗದಂತೆ

ನೋಡಿಕೊಳ್ಳಬೇಕು. ನಿರಂತರ ಸ್ವಚ್ಛತಾ ಕ್ರಮಗಳಿಂದ ಈ ಖಾಯಿಲೆ ಬರದಂತೆ ತಡೆಯಬಹುದು ಎಂದು ಅವರು ಸಲಹೆ ನೀಡಿದರು.

ಸಂಸ್ಥೆ ಕಾರ್ಯದರ್ಶಿ ಎಮ.ಎಮ್. ಕಾಡೇಶನವರ ಮಾತನಾಡಿದರು. ಪ್ರಮುಖರಾದ ಶ್ರೀಶೈಲ ಎಡಳ್ಳಿ, ನಿಂಗಪ್ಪ ಚೌಡಣ್ಣವರ, ಮಡಿವಾಳಪ್ಪ ಹೋಟಿ, ಆನಂದ ಮೂಗಿ, ಅಶೋಕ ಮಾರಿಹಾಳ, ಎನ್.ಎಮ್.ಕರೀಕಟ್ಟಿ, ಚಂದನ ಕೌಜಲಗಿ, ಆದರ್ಶ ಗುಂಡಗೋವಿ, ಎಮ್.ಪಿ.ಉಪ್ಪಿನ, ರಾಜು ದಳವಾಯಿ ಸೇರಿದಂತೆ ದೊಡವಾಡ ಗ್ರಾಮದ ಶ್ರೀ ವೀರಭದ್ರೇಶ್ವರ ಪ್ರೌಢ ಮತ್ತು ಪ್ರಾಥಮಿಕ ಹಾಗೂ ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಗಳಲ್ಲೂ ಕೂಡ ಡಾ.ವಿಶ್ವನಾಥ ಪಾಟೀಲರಿಂದ ಡೆಂಗ್ಯೂ ಪ್ರತಿಬಂಧಕ ಲಸಿಕೆ ಹನಿ ನೀಡುವ ಶಿಬಿರಕ್ಕೆ ಚಾಲನೆ ನೀಡಲಾಯಿತು.

ವಿಜ್ಞಾನ ಶಿಕ್ಷಕ ಕೆ.ಬಿ.ಕಡೆಮನಿ ಡೆ–ಂಗ್ಯೂ ಪ್ರಮುಖ ಲಕ್ಷಣಗಳು ಮತ್ತು ಅದು ಬರದಂತೆ ಅನುಸರಿಸಬೇಕಾದ ಉಪಯಯಕ್ತ ಕ್ರಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು. ಮುಖ್ಯ ಶಿಕ್ಷಕಿ ಬಿ.ಆರ್.ಹುತಮಲ್ಲಮನವರ, ದೈಹಿಕ ಶಿಕ್ಷಕ ಎಮ್.ಸಿ.ಸಂಗೊಳ್ಳಿ ಮತ್ತು ಶಿಕ್ಷಕ ಶಿಕ್ಷಕಿಯರು ಪಾಲ್ಗೊಂಡಿದ್ದರು.

ಗರ್ಭಿಣಿ ಅನುಮಾನಾಸ್ಪದ ಸಾವು, ಪತಿ ವಿರುದ್ಧ ದೂರ ದಾಖಲು

ಬೆಳಗಾವಿ : ರೀಲ್ಸ್ ಮೂಲಕ ಖ್ಯಾತಿ ಗಳಿಸಿದ್ದ ಗರ್ಭಿಣಿಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಬೆಳಗಾವಿ ತಾಲೂಕಿನ ಮಚ್ಛೆಯಲ್ಲಿ ನಡೆದಿದೆ. ಮಂಜುಳಾ ಬೋರೇಶ ಗದ್ದಿಹೊಳಿ (22) ಮೃತರು.

ಮೈಸೂರು ಮೂಲದ ಮಂಜುಳಾ ಹಾಗೂ ಬೆಳಗಾವಿಯ ಬೋರೇಶ ಗದ್ದಿಹೊಳಿ ಇನ್‌ಸ್ಟಾಗ್ರಾಂನಲ್ಲಿ ರೀಲ್ಸ್ ಮಾಡುವ ಮೂಲಕ ಪರಸ್ಪರ ಪರಿಚಯವಾಗಿದ್ದರು. ಆ ಪರಿಚಯ ಪ್ರೀತಿಗೆ ತಿರುಗಿತ್ತು. ಆ ಬಳಿಕ ಮನೆಯವರ ವಿರೋಧದ ನಡುವೆಯೂ ಮನೆ ಬಿಟ್ಟು ಹೋಗಿ ಮದುವೆ ಆಗಿದ್ದರು. ನಂತರ ಮಚ್ಛೆಯಲ್ಲಿ ವಾಸವಾಗಿದ್ದರು. ಸದ್ಯ ಮಂಜುಳಾ ಮೂರು ತಿಂಗಳ ಗರ್ಭಿಣಿಯಾಗಿದ್ದರು. ಆದರೆ, ನಿನ್ನೆ (ಶುಕ್ರವಾರ) ರಾತ್ರಿ ಮಂಜುಳಾ ಸಾವನ್ನಪ್ಪಿದ್ದಾರೆ.

ಪತಿಯೇ ಕೊಲೆ ಮಾಡಿದ್ದ

ವನ ಮಹೋತ್ಸವ ದಿನಾಚರಣೆ–ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆ ಮಾಡಿ: ಪಾವಡಿ ಗೌಡರ

ಕೊಪ್ಪಳ : ಪರಿಸರ ಸಂರಕ್ಷಣೆ ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದ್ದು, ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆ ಮಾಡಬೇಕು ಎಂದು ಮುನಿರಾಬಾದ್ ವಲಯ ಅರಣ್ಯಾಧಿಕಾರಿಗಳಾದ ಪಾವಡಿ ಗೌಡರ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧ್ರುವ ಪರಿಸರ ಮಾಲಿನ್ಯ ನಿಯಂತ್ರಣ ಸಂರಕ್ಷಣೆ ಸಂಸ್ಥೆ ಕೊಪ್ಪಳ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅರಣ್ಯ ಇಲಾಖೆ ಹಾಗೂ ಕೊಪ್ಪಳ ನೆಹರು ಯುವ ಕೇಂದ್ರ ಇವರ ಸಹಯೋಗದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳಲಾಗಿದ್ದ ವನ ಮಹೋತ್ಸವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜೀವ ರಾಶಿಗಳಿಗೆ ಪರಿಸರ ಅತ್ಯವಶ್ಯಕವಿದ್ದು, ಇದರ ಸಂರಕ್ಷಣೆಗಾಗಿ ನಮ್ಮ ಕರ್ತವ್ಯವನ್ನು ಗಂಭೀರವಾಗಿ ಪರಿಗಣಿಸಬೇಕು. ಎಲ್ಲರೂ ತಮ್ಮ ಮನೆಗಳ ಸುತ್ತಮುತ್ತಲಿನಲ್ಲಿ ಸಸಿಗಳನ್ನು ನೆಡುವ ಹವ್ಯಾಸ ರೂಡಿಸಿಕೊಳ್ಳಬೇಕು.

ಇಂದಿನ ಯುವ ಜನಾಂಗವು ನಾಳೆಯ ಭವ್ಯ ನಾಗರಿಕರಾಗಿದ್ದು, ಪರಿಸರ ರಕ್ಷಣೆಯಲ್ಲಿ ಯುವ ಜನಾಂಗವು ಹೆಚ್ಚಿನ ಜವಾಬ್ದಾರಿ ವಹಿಸಬೇಕು. ಪರಿಸರದಲ್ಲಿ ಯಾರಾದರೂ ಮರಗಳನ್ನು ಕಡಿಯುತ್ತಿದ್ದರೆ ಅಂತವರನ್ನು ತಡೆಹಿಡಿದು, ಅವರಿಗೆ ಮರ ಕಡಿಯದಂತೆ ಎಚ್ಚರಿಕೆಯನ್ನು ನೀಡಬೇಕು. ಮರಗಳನ್ನು ಕಡಿಯುತ್ತಿರುವ ಮಾಹಿತಿಯನ್ನು ಸ್ಥಳೀಯ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಬೇಕು. ಅಂತವರ ವಿರುದ್ಧ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತರಾದ ಜಿ.ಎಸ್ ಗೋನಾಳ ಅವರು ಮಾತನಾಡಿ, ಪರಿಸರ ಸಂರಕ್ಷಣೆ–ಯು ಪ್ರತಿಯೊಬ್ಬ ವ್ಯಕ್ತಿಯ ಮುಖ್ಯ ಕರ್ತವ್ಯವಾಗಿದೆ. ಮಲೆನಾಡು ಪ್ರದೇಶಗಳಂತೆ ಕೊಪ್ಪಳ ನಗರವನ್ನು ಹಸೀರಿಕರಣ ಮಾಡುತ್ತೆವೆ ಎಂದು ಈ ಸಂಧರ್ಭದಲ್ಲಿ ಪಣತೋಟ್ಟು ಪ್ರತಿಯೊಬ್ಬರು ಒಂದೋಂದು ಗಿಡವನ್ನು ನೆಡಬೇಕು. ಪರಿಸರ ಸಂರಕ್ಷಣೆಯಿಂದ ಸದೃಢ ಆರೋಗ್ಯವನ್ನು ಸಾಧಿಸಬಹುದಾಗಿದ್ದು, ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಪರಿಸರವನ್ನು ಸಂರಕ್ಷಿಸಬೇಕು. ನಾವು ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸಬೇಕಾದರೆ ಪರಿಸರ ಸಂರಕ್ಷಣೆ ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡ್ರ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ, ಎಲ್ಲಾರೂ ಹೆಚ್ಚು ಹೆಚ್ಚು ಗಿಡಗಳನ್ನು ನೆಡುವುದರ ಮೂಲಕ ಪರಿಸರ ಸಂರಕ್ಷಣೆಯನ್ನು ಮಾಡೋಣ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಎಂ.ಸಾಧಿಕ್ ಅಲಿ, ಸಹಾಯಕ ಪರಿಸರ ಅಧಿಕಾರಿಗಳಾದ ಅಮರ್, ಕಾರ್ಯಕ್ರಮದ ಆಯೋಜಕರಾದ ಎಂ.ಎನ್ ಕುಂದಗೋಳ್ ಧ್ರುವ, ಪರಿಸರ ಮಾಲಿನ್ಯ ನಿಯಂತ್ರಣ ಸಂರಕ್ಷಣಾ ಸಂಸ್ಥೆಯ ಮುಖ್ಯಸ್ಥರಾದ ಎಸ್.ಎಂ ಹಿರೇಮಠ ಸೇರಿದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು

ನಿವೃತ್ತ ನೆಚ್ಚಿನಗುರುವಿಗೆ ವಿದ್ಯಾರ್ಥಿಗಳಿಂದ ಕಲ್ಪವೃಕ್ಷ ಕಾಣಿಕೆ

ಜಮಖಂಡಿ : ತಮ್ಮ ಅಚ್ಚುಮೆಚ್ಚಿನ ಗುರುಯೊಬ್ಬರು ಸೇವಾನಿವೃತ್ತಿ ದಿನದಂದು ಶಾಲಾಮಕ್ಕಳು ಗುರು ದೇವೋಭವನ ಗುಣಗಾನದೊಂದಿಗೆ ಸಂಪ್ರೀತಿ ಕಾಣಿಕೆ ಸಮರ್ಪಿಸಿಧನ್ಯತಾಭಾವಮೆರೆದು ಗುರುವಿಗೆ ವಿಭಿನ್ನ ಸವಿನೆನಪಿನ ಕಾಣಿಕೆ ನೀಡಿ ಗಮನ ಸೆಳೆದರು.

ಉತ್ತಮ ಮನೋಭಾವದ ಗುರುಜಿಗೆ ವಿದ್ಯಾರ್ಥಿಗಳು ನೀಡಿದ ಕಾಣಿಕೆ ವಿಶೇಷವಾಗಿತ್ತು. ಅದು ಪರಿಸರ ಕಾಳಜಿ ಕಳಕಳಿ ಹೊಂದಿರುವ ಕಾಣಿಕೆ. ಗುರುಝಿ ವಿಶ್ರಾಂತ ಜೀವನ ಕಲ್ಪವೃಕ್ಷದಂತೆ ಅರಳಲಿ. ಸವಿಸಿಹಿ ಭಾವ ಬಂಧನ ಗಟ್ಟಿಗೊಳ್ಳಲ್ಲಿ. ಔದಾರ್ಯ ಗುಣದ ಪ್ರೀತಿಭರಿತ ಪುಷ್ಪರಸ ಇನ್ನೂ ಶಿಷ್ಯವೃಂದಕ್ಕೆ ಲಭಿಸಲಿ ಎನ್ನುವ ಉದಾತ್ತ ಸಿಂಚನದೊಂದಿಗೆ ಸವಿನೆನಪಿಗಾಗಿ ಕಲ್ಪವೃಕ್ಷದ ಸಸಿ ನೀಡಿ ಮಹೋನ್ನತ ಪರಿಸರ ಸ್ನೇಹಕ್ಕೆ ಮುಂದಾದರು. ತಮ್ಮ ಅಂತರಂಗದಲ್ಲಿ ಹಸಿರಿನ ಹಸಿವು ಗುರುವಿಗೆ ಕಲ್ಪವೃಕ್ಷ ಸಸಿ ನೀಡುವ ಗುರುವಿನ ಋಣ ತೀರಿಸುವ ಸೇವೆಗೈದರು.

ಕೃಷ್ಣೆಯ ಸೆರೆಗಿನಲ್ಲಿರುವ ಚಿಕ್ಕಪಡಸಲಗಿ ಗ್ರಾಮದಲ್ಲಿರುವ ಗದುಗಿನ ತೋಂಟದಾರ್ಯ ವಿದ್ಯಾಪೀಠಸಂಸ್ಥೆ ಶಿವಶರಣ ಹರಳಯ್ಯಸ್ಮಾರಕಪ್ರೌಢಶಾಲೆಯಲ್ಲಿ ದೈಹಿಕಶಿಕ್ಷಕರಾಗಿ ಬಸವರಾಜ ಅನಂತಪುರ ಕಳೆದ 39 ವರ್ಷದಿಂದ ಅತ್ಯಂತ ಶಿಸ್ತುಬದ್ಧ ವೃತ್ತಿಕಾಯಕ ಸಲ್ಲಿಸಿದ್ದಾರೆ. ಸೇವಾ ಅವಧಿಯಲ್ಲಿ ಎಲ್ಲರ ಪ್ರೀತಿ, ವಿಶ್ವಾಸ ಪಡೆದು ಸೇವಾನಿವೃತ್ತಿ ಹೊಂದಿದ್ದ ಪ್ರಯುಕ್ತ ವಿದ್ಯಾರ್ಥಿಗಳು ಕಲ್ಪವೃಕ್ಷ ಸಸಿತಮ್ಮಗುರುವಿಗೆಕಾಣಿಕೆಯಾಗಿ ನೀಡಿಲ್ಲದೆ ಗುರುವಿನ ಅಮೃತ ಹಸ್ತದಿಂದ ಸವಿನೆನಪಿಗಾಗಿ ಶಾಲಾ ಆವರಣದಲ್ಲಿ ಕಲ್ಪವೃಕ್ಷ ಟೆಂಗಿನ ಸಸಿ ನೆಟ್ಟು ಮಾನವೀಯತೆ ಮೆರೆದರು.

ಪರಿಸರ ಸ್ನೇಹಕ್ಕೆ ವಿದ್ಯಾರ್ಥಿಗಳ ಕ್ರಿಯಾತ್ಮಕ ವಿಶೇಷತೆ ಕಾಯಕ ಸಾರ್ಥಕ ಎನಿಸಿತು. ವಿದ್ಯಾರ್ಥಿಗಳಾದ ಕವಿತಾ ಲಾಯ್ಯನವರ, ಸ್ವಾತಿ ಯಲಗುದ್ರಿ, ಪ್ರಿಯಾಂಕಾ ಜಾಯಗೊಂಡ, ಪ್ರತೀಕ್ಷಾ ಜಾಯಗೊಂಡ, ಕಾವೇರಿ ಹಾದಿಮನಿ, ಸಾಕ್ಷಿ ಜಾಧವ ಸಹಿತ ಸ್ನೇಹಪಾಠಿಗಳು ಟೆಂಗಿನ ಸಸಿ ಗುರುವಿಗೆ ನೀಡಿ ಗೌರವಿಸಿದರು. ಶಿಕ್ಷಕರಾದ ಈರಣ್ಣ ದೇಸಾಯಿ, ಸದಾಶಿವ ಸಿದ್ದಾಪುರ, ಲೋಹಿತ ಮಿರ್ಜಿ, ಜಿ.ಆರ್.ಜಾಧವ, ಕವಿತಾ ಅಂಬಿ, ಪ್ರಮೀಳಾ ತೆಲಸಂಗ, ಸಹನಾ ಹತ್ತಳ್ಳಿ, ಹಣಮಂತ ಗದಿಗೆಪ್ಪಗೋಳ, ದೈಹಿಕ ಶಿಕ್ಷಕ ಕುಮಾರ ವಾಣಿ ಸಹಿತ ಹಲವರು ಇದ್ದರು.

ಎಲ್ಲರಲ್ಲಿ ಪರಿಸರಪ್ರೇಮ ಇರಲಿ

ಶಾಲಾಮಕ್ಕಳಲ್ಲಿ ಪರಿಸರ ಪ್ರೇಮ ವ್ಯಾಪಕವಾಗಿ ಜಾಗೃತವಾಗಬೇಕು. ಗಿಡಮರಗಳನ್ನು ನೆಟ್ಟು ಸಂರಕ್ಷಿಸಲು ಮುಂದಾದರೆ ಅವು ನಮ್ಮನ್ನು ರಕ್ಷಣೆ ಮಾಡುತ್ತವೆ. ಶುದ್ಧ ಗಾಳಿ ನೀಡುವ ಮೂಲಕ ಜೀವ ಚೈತನ್ಯ ಕರುಣಿಸುತ್ತವೆ. ಪ್ರತಿಯೊಬ್ಬರಲ್ಲಿ ಇಂತಹ ಪರಿಸರ ಕಾಳಜಿ ಇರಬೇಕಾಗಿರುವುದು ಅತ್ಯಗತ್ಯವಾಗಿದೆ.

। ಬಸವರಾಜ ಜಾಲೋಜಿ
ಮುಖ್ಯಶಿಕ್ಷಕರು, ಚಿಕ್ಕಪಡಸಲಗಿ

ಸಮಾಜಸೇವೆ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ಬೆಳವಣಿಗೆಗೆ ಸಹಾಯಕ ಮಾಜಿ ಅಧ್ಯಕ್ಷ ಒಂಟಗೋಡಿ

ಮೂಡಲಗಿ : ಸಮಾಜಸೇವೆ ವಿದ್ಯಾರ್ಥಿಗಳ ಜೀವನದಲ್ಲಿ ಸ್ಫೂರ್ತಿದಾಯಕ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾಗಿದ್ದು ವಿದ್ಯಾರ್ಥಿ ಜೀವನದಲ್ಲಿ ಗ್ರಾಮೀಣ & ನಗರ ಸಮಾಜದ ನೈಜ ಅರಿವು ಪಡೆದು ಕೊಳ್ಳಲು ಎನ್.ಎಸ್.ಎಸ್. ನಂತಹ ಸಾಮಾಜಿಕ ಸಂಘಟನೆಗಳ ಪಾತ್ರ ಮಹತ್ವದಾಗಿದ್ದು ಎಂದು ಮುನ್ಯಾಳ ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷರಾದ ಗೋವಿಂದ ಒಂಟಗೋಡಿ ಹೇಳಿದರು.

ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜಕಾರ್ಯ ಪದವಿ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ವತಿಯಿಂದ ಸಮೀಪದ ದತ್ತು ಗ್ರಾಮ ಮುನ್ಯಾಳದಲ್ಲಿ ಹಮ್ಮಿಕೊಂಡ ಎನ್.ಎಸ್.ಎಸ್. ವಾರ್ಷಿಕ ಶಿಬಿರವನ್ನು



ಉದ್ಘಾಟಿಸಿ ಮಾತನಾಡಿ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವದರಿಂದ ನಾಯಕತ್ವದ ಗುಣದ ಜೊತೆಗೆ ಸಂಘಟನಾತ್ಮಕ ಪ್ರವೃತ್ತಿಗಳು ಬೆಳೆದು ಬರುತ್ತೇವೆ ಎಂದರು.

ಮುನ್ಯಾಳದ ಸರಕಾರಿ ಪ್ರೌಡ ಶಾಲೆಯ ಮುಖ್ಯೋಪಾಧ್ಯಾಯ ಎ. ಎ. ಪೀರಜಾದೆ ಮಾತನಾಡಿ ಎನ್.ಎಸ್.ಎಸ್. ಶಿಬಿರಗಳು ಸಾಮಾಜಿಕ ಜೀವನದ ವಿಚಾರದಾರೆಗಳ ಅರಿವು ಮೂಡಿಸುವ ಸಿದ್ಧಾಂತ ಮೇಲೆ ರಚಿತವಾಗಿದ್ದು ಅದರ ಸದಸ್ಯರಾಗಿ ಪಾಲ್ಗೊಂಡು ವಿದ್ಯಾರ್ಥಿಗಳು ಸರಿಯಾದ ಪ್ರಯೋಜನವನ್ನು ಪಡೆದುಕೊಳ್ಳಲು ಮುಂದಾಗಬೇಕೆಂದರು.

ಕಾರ್ಯಕ್ರಮದಲ್ಲಿ ಕಾಲೇಜು ಪ್ರಾಚಾರ್ಯ ಸತ್ಯೆಪ್ಪ ಗೋಟೂರೆ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುನ್ಯಾಳ ಗ್ರಾಮಪಂಚಾಯತ ಅಧ್ಯಕ್ಷೆ ದುರ್ಗವ್ವ ಸಂ. ಜಂಬಗಿ ವಹಿಸಕೊಂಡಿದ್ದರು

ಕಾರ್ಯಕ್ರಮದಲ್ಲಿ ದಯಾನಂದ ನಾಯ್ಕ, ಮಡೆಪ್ಪ ಒಡೆಯರ, ಶ್ರೀಶೈಲ್ ಸೂರನ್ನವರ, ಅಶೋಕ ಬಾ ಚಿಕ್ಕೋಡಿ, ಮುತ್ತು ಒಡೆಯರ, ಸಂಜು ಹಿರೇಹೊಳಿ, ಮಡೆಪ್ಪ ಮದಿಹಳ್ಳಿ, ಸುಭಾಸ ಮಾಲೋಜಿ, ಉಮೇಶ ಪುಟ್ಟಿ, ಇತರರು ಹಾಜರಿದ್ದರು. ಉಪನ್ಯಾಸಕ ಸಂಜೀವ ಮಂಟೂರ ನಿರೂಪಿಸಿದರು ಎನ್.ಎಸ್.ಎಸ್. ಘಟಕಾಧಿಕಾರಿ ಉಪನ್ಯಾಸಕ ಪಿ.ಬಿ. ಚೌಡಕಿ ಸ್ವಾಗತಿಸಿದರು ರಾಜು ಪತ್ತಾರ ವಂದಿಸಿದರು.

ವಾಲ್ಮೀಕಿ ನಿಗಮ ಹಗರಣ: ತಪ್ಪು ಮಾಡಿದವರು ಒಪ್ಪಿಕೊಳ್ಳಬೇಕು: ಸಚಿವ ಸತೀಶ್ ಜಾರಕಿಹೊಳಿ

ಬೆಳಗಾವಿ : ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಯಾ–ರೇ ತಪ್ಪು ಮಾಡಿದ್ದರೂ ಅದು ತಪ್ಪೇ. ತಪ್ಪನ್ನು ಒಪ್ಪಿಕೊಳ್ಳಬೇಕು. ಹತ್ತು ಸುಳ್ಳು ಹೇಳುವುದಕ್ಕಿಂತ ಒಪ್ಪಿಕೊಂಡು ಬಿಟ್ಟರೆ ಅದು ಅಲ್ಲಿಗೇ ಮುಗಿಯುತ್ತದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿಂದು ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ರಾಜಕೀಯ ವಿಚಾರ ಅಂತಾ ಈಗಲೇ ಹೇಳಲು ಆಗಲ್ಲ. ಅದೇ ರೀತಿ, ಇಲ್ಲ ಅಂತಾನೂ ಹೇಳೇಕೆ ಆಗಲ್ಲ. ತನಿಖೆ ನಡೀತಿ ದೆ. ದಾಖಲೆ ನೋಡಿದ ಮೇಲೆ ಏನು ಅಂತಾ ಗೊತ್ತಾಗುತ್ತದೆ ಎಂದರು.

ನಾಗೇಂದ್ರ ವಿಚಾರದಲ್ಲಿ ಸರ್ಕಾರಕ್ಕೆ ಮುಜುಗರವಾಗಿದೆಯೇ ಎಂದ ಪ್ರಶ್ನೆಗೆ, ತಪ್ಪು ಮಾಡಿದ್ದರೆ ಖಂಡಿತಾ ಮುಜುಗರ ಆಗುತ್ತದೆ. ಮಂತ್ರಿಗಳು, ಶಾಸಕರು ಭಾ–ಗಿಯಾಗಿದ್ದರೆ ಸರ್ಕಾರಕ್ಕೆ ಅದರಿಂದ ಕಳಂಕ ಎಂದು ಹೇಳಿದರು. ಬಿಜೆಪಿ ಸಿಎಂ ರಾಜೀನಾಮೆಗೆ ಒತ್ತಾಯಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿ, ಸಿಎಂಗೆ ಇದರಿಂದ ಏನೂ

ಸಮಸ್ಯೆ ಇಲ್ಲ. ಕೆಳಗಿನವರು ಸಮಸ್ಯೆ ಮಾಡಿದರೆ ಅದು ಮುಖ್ಯಮಂತ್ರಿಗಳಿಗೆ ಸಂಬಂಧ ಇಲ್ಲ. ನಮ್ಮ ಇಲಾಖೆ ನಾವು ನೋಡಿಕೊಳ್ಳಬೇಕಾಗುತ್ತದೆ. ಅದ–ಕ್ಕೆ ನಾವೇ ಜವಾಬ್ದಾರರು. ಹಾಗಾಗಿ, ಸಿಎಂಗೂ ಇದಕ್ಕೂ ಸಂಬಂಧವಿಲ್ಲ ಎಂದು ಸಮರ್ಥಿಸಿಕೊಂಡರು.

ಮುಡಾ ಹಗರಣ ಹಿನ್ನೆಲೆಯಲ್ಲಿ ಬಿಜೆಪಿಯಿಂದ ಮೈಸೂರು ಚಲೋ ವಿಚಾರಕ್ಕೆ, ಅದರಿಂದ ಏನೂ ಆಗುವುದಿಲ್ಲ. ಅಂಥ ಬಹಳಷ್ಟು ಕೇಸ್‌ಗಳಾಗಿವೆ. ಮುಡಾ ಹಾಗೂ ವಾಲ್ಮೀಕಿ ನಿಗಮ ಎರಡನ್ನೂ ಹೋಲಿಸಲು ಆಗಲ್ಲ.

ಅವು ಬೇರೆ, ಬೇರೆ. ಲ್ಯಾಂಡ್ ಹೋಗಿದ್ದು, ಲ್ಯಾಂಡ್ ಬಂದಿದೆ. ನಾವು ಕೂಡಾ ಬುಡಾದಲ್ಲಿ ಆ ರೀತಿ ಕೊಟ್ಟಿದ್ದೇವೆ. ಆ ರೀತಿ ಬೇರೆ ಕಡೆಯೂ ಆಗಿದೆ. ಆದ್ದ–ರಿಂದ ಮುಡಾವನ್ನು ರಾಜಕೀಯ ಅಂತಾ ಹೇಳಬಹುದು ಎಂದು ಸತೀಶ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಆಂತರಿಕಜಗಳದಿಂದಮುಡಾ ಹೊರ ಬಂತೇ ಎಂಬ ಮಾಧ್ಯಮಗಳ ಪ್ರಶ್ನೆಗೆಉತ್ತರಿಸಿದಜಾರಕಿಹೊಳಿ,ಹಗರಣ ಮಾಡಿದ್ದರೆ ಅದು ಯಾವಾಗಲಾದರೂ ಹೊರಗೆ ಬಂದೇ ಬರುತ್ತದೆ. ಕಾಂಗ್ರೆಸ್ ಒಳಜಗಳ, ಬೇರೆಜಗಳ ಅಂತಿಲ್ಲ ಎಂದು ಹೇಳಿದರು.

ಮಕ್ಕಳ ರಕ್ಷಣಾ ವ್ಯವಸ್ಥೆಗಳ ಕುರಿತು ಭಾಗೀದಾರರೊಂದಿಗೆ ಸಭೆ

ಎಲ್ಲ ವಸತಿ ನಿಲಯ, ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ–2016 ಅನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು: ಶೇಖರಗೌಡ ಜಿ.ರಾಮತ್ನಾಳ

ಕೊಪ್ಪಳ : ಜಿಲ್ಲೆಯ ಎಲ್ಲ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ, ಬಾಲಮಂದಿರಗಳಲ್ಲಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿ–2016ಅನ್ನುಕಡ್ಡಾಯವಾಗಿಅಳವಡಿಸಿಕೊಂಡು, ನಿಯಮಾನುಸಾರ ಅನುಷ್ಠಾನಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ.ರಾಮತ್ನಾಳ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ, ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರ ಸಹಯೋಗದಲ್ಲಿ ಶುಕ್ರವಾರದಂದು ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿಆಯೋಜಿಸಿದ್ದಮಕ್ಕಳರಕ್ಷಣಾ ವ್ಯವಸ್ಥೆಗಳ ಕುರಿತು ಭಾಗೀದಾರರೊಂದಿಗೆ ಸಮಾಲೋಚನೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳ ರಕ್ಷಣಾ ನೀತಿ–2016 ರಲ್ಲಿ ಮಕ್ಕಳಿಗೆ ಒದಗಿಸಬೇಕಾದ ಅಗತ್ಯ ಮೂಲಭೂತ ಸೌಕರ್ಯಗಳು, ಭದ್ರತೆ, ಮಕ್ಕಳ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು, ಮುಂತಾದ ವಿಷಯಗಳ ಕುರಿತು ವಿಶೇಷ ಹಾಗೂ ವಿವರವಾದ ನಿಯಮಗಳಿವೆ. ಆದ್ದರಿಂದ ಜಿಲ್ಲೆಯ ಎಲ್ಲ ವಸತಿ ನಿಲಯ, ವಸತಿ ಶಾಲೆ, ಶೈಕ್ಷಣಿಕ ಸಂಸ್ಥೆಗಳು, ಬಾಲಮಂದಿರಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು. ಆ ಮೂಲಕ ನೀತಿಯನ್ವಯ ಎಲ್ಲ ಸೌಲಭ್ಯವನ್ನು ಮಕ್ಕಳಿಗೆ ಒದಗಿಸಬೇಕು. ಈ ಕುರಿತಂತೆ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿ, ಪಾಲಿಸುತ್ತೇವೆ ಎಂಬುದಾಗಿ ಬದ್ಧತಾ ಪತ್ರಕ್ಕೆ ಸಹಿ ಹಾಕಬೇಕು ಎಂದು ಸದಸ್ಯರು ಅಧಿಕಾರಿಗಳಿಗೆ ಸೂಚಿಸಿದರು.

ಎಲ್ಲ ವಸತಿ ನಿಲಯಗಳಲ್ಲಿ ಸಲಹಾ ಪೆಟ್ಟಿಗೆ ಇಡಬೇಕು. ಊಟದ ಕೋಣೆ, ಸ್ಟಡಿ ರೂಂಗೆ ಹೋಗುವಮಾರ್ಗ,ಶೌಚಾಲಯ,ಸ್ನಾನಗೃಹಕ್ಕೆ ಹೋಗುವ ಮಾರ್ಗಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ವಸತಿ ನಿಲಯದ ವಿದ್ಯಾರ್ಥಿಗಳು ಸಲಹಾ ಪೆಟ್ಟಿಗೆಯಲ್ಲಿ ತಮ್ಮ ದೂರು, ಸಲಹೆಗಳನ್ನು ಹಾಕುವಂತೆ ಸೂಚಿಸಬೇಕು. ಯಾವುದೇ ಕಾರಣಕ್ಕೂ ವಸತಿ ನಿಲಯದ ವಾರ್ಡನ್‌ಗಳು ಸಲಹಾ ಪೆಟ್ಟಿಗೆಯನ್ನು ತೆರೆದು ನೋಡುವಂತಿಲ್ಲ. ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಕಡ್ಡಾಯವಾಗಿ ಮಹಿಳಾ ವಸತಿ ನಿಲಯ ಪಾಲಕರು ಇರಬೇಕು. ಈ ಎಲ್ಲ ಕ್ರಮಗಳ ಬಗ್ಗೆ ಹಾಗೂ ಮಕ್ಕಳ ರಕ್ಷಣಾ ನೀತಿ–2016 ಅನ್ನು ಅಳವಡಿಸಿಕೊಂಡ ಬಗ್ಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ವರದಿಯನ್ನು ಸಲ್ಲಿಸಬೇಕು. ಇಲಾಖೆಗಳ ಅಧಿಕಾರಿಗಳು ನಿಯಮಿತವಾಗಿ ವಸತಿ ನಿಲಯ, ವಸತಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಪ್ರಸ್ತುತ ಡೆ–ಂಗ್ಯೂ ಜ್ವರ ತೀವ್ರತೆ ಪಡೆಯುತ್ತಿದ್ದು, ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ವಸತಿ ನಿಲಯ, ವಸತಿ ಶಾಲೆ, ಇತರೆ ಶೈಕ್ಷಣಿಕ ಸಂಸ್ಥೆಗಳು, ಅಂಗನವಾಡಿಗಳ ಸುತ್ತಲಿನ ಪ್ರದೇ

ಅವರೇ ನನ್ನ ಶಿಕ್ಷಕರು

ಅಮ್ಮನ ಗುಣದವರು
ಪ್ರೀತಿಯಲ್ಲಿ ಶ್ರೇಷ್ಠರು
ಮಕ್ಕಳ ಜೊತೆ ಮಕ್ಕಳಾಗಿ ಬೆರತವರು
ಅವರೇ ನನ್ನ ಶಿಕ್ಷಕರು!!!!

ಈ ಜಗದಲ್ಲಿ ತಲೆಯೆತ್ತಿ ನಡೆಯಲು ಕಲಿಸಿ
ಅಜ್ಞಾನವ ಹೊಡೆದೋಡಿಸಿ
ಜ್ಞಾನದ ಬೀಜ ಬಿತ್ತಿದವರು
ಅವರೇ ನನ್ನ ಶಿಕ್ಷಕರು!!!

ನನ್ನ ಜೀವನದ ಬೆಳಕಾಗಿ
ಪ್ರತಿನಿತ್ಯ ಪೂಜಿಸುವ ದೇವರ ಸ್ವರೂಪವಾಗಿ
ಕಣ್ಣಿಗೆ ಕಾಣುವ ದೇವರಾದವರು
ಅವರೇ ನನ್ನ ಶಿಕ್ಷಕರು!!!

ತಾಯಿಯಂತೆ ಪ್ರೀತಿಸುತ್ತಾ
ತಂದೆಯಂತೆ ಫರ್ಜಿಸುತ್ತಾ
ನನ್ನಲ್ಲಿ ಕನಸು ಕಾಣುವ ಹುಮ್ಮಸ್ಸನ್ನು ಹೆಚ್ಚಿಸುತ್ತಾ ಇರುವವರೇ
ಅವರೇ ನನ್ನ ಶಿಕ್ಷಕರು!!!!

ನನ್ನ ಅಹಂಕಾರವನ್ನು ಹೊಡೆದೋಡಿಸಿ
ನಾನು ಮಾಡಿದ ತಪ್ಪನ್ನು ಸರಿಪಡಿಸಿ
ನನ್ನಲ್ಲಿ ಸದ್ಗುಣಗಳನ್ನು ರೂಪಿಸಿದವರು
ಅವರೇ ನನ್ನ ಶಿಕ್ಷಕರು !!!!

– ಭಾಗೀರಥಿ ಕುಳಲಿ

ಲಯನ್ಸ್ ಕ್ಲಬ್ ಪದಗ್ರಹಣ ಸಮಾರಂಭ

ಸಮಾಜಸೇವೆಯಲ್ಲಿಲಯನ್ಸ್‌ಕ್ಲಬ್ ಸಮಾಜಸೇವೆಯಲ್ಲಿಮುಂಚೂಣಿಯಲ್ಲಿ

ಮಹಾಲಿಂಗಪುರ:ಲಯನ್ಸ್‌ಕ್ಲಬ್ ಸಮಾಜಸೇವೆಯಲ್ಲಿ ಮುಂಚೂಣಿಯಲ್ಲಿದೆ. ಸಮಾಜದಲ್ಲಿನ ಪ್ರತಿಯೊಬ್ಬರಿಗೂ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಲು ಲಯನ್ಸ್‌ಕ್ಲಬ್ ವೇದಿಕೆಯಾಗಿದೆ ಎಂದು ಬೆಳಗಾವಿಯ ಲಯನ್ಸ್ ಕ್ಲಬ್ ಹಿರಿಯ ಸದಸ್ಯೆ ಭಾರತಿ ವಡವಿ ಹೇಳಿದರು.

ಪಟ್ಟಣದ ವೈದ್ಯರ ಸಭಾಭವನದಲ್ಲಿ ಲಯನ್ಸ್ ಕ್ಲಬ್ ಆಫ್ ಮಹಾಲಿಂಗಪುರ ಗ್ರೀನ್ ಬೇಸಿನ್ ಏರ್ಪಡಿಸಿದ್ದ 2024–25ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸಿ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸಿ ಮಾತನಾಡಿದರು.

ಮಹಾಲಿಂಗಪುರ ಲಯನ್ಸ್‌ಕ್ಲಬ್ ತನ್ನ ಸಮಾಜಮುಖಿ ಕಾರ್ಯಗಳಿಂದ ಇತರರಿಗೆ ಮಾದರಿಯಾಗಿದೆ. ಆರೋಗ್ಯ ಉಚಿತ ತಪಾಸಣೆ, ಬಡವರಿಗೆ ಅಗತ್ಯ

ಪರಿಕರಗಳನ್ನು ನೀಡುವ ಮೂಲಕ ಅವರ ಸ್ವಾವಲಂಬಿ ಬದುಕಿಗೆ ಸಂಸ್ಥೆಯು ಬೆಳಕಾಗುತ್ತದೆ ಎಂದರು.

ನೂತನ ಅಧ್ಯಕ್ಷ ರಾಜು ತಾಳಿಕೋಟಿ ಅವರಿಗೆ ನಿಕಟಪೂರ್ವ ಅಧ್ಯಕ್ಷ ಡಾ.ಮಾರುತಿ ಮೇದಾರ ಅಧಿಕಾರ ಹಸ್ತಾಂತರಿಸಿದರು. ನೂತನ ಅಧ್ಯಕ್ಷ ಮಾತನಾಡಿ, ಕ್ಲಬ್‌ನ ಎಲ್ಲಾ ಸದಸ್ಯರ ಸಹಯೋಗದೊಂದಿಗೆ ಎಲ್ಲರಿಗೂ ಮಾದರಿಯಾಗುವ ರೀತಿಯಲ್ಲಿ ಹಲವಾರು ಸೇವಾ ಕಾರ್ಯಗಳೊಂದಿಗೆ ಸಮಾಜಮುಖಿ ಕೆಲಸ ಮಾಡಲು ಸಿದ್ಧರಿರುವುದಾಗಿ ತಿಳಿಸಿದರು.

ಲಯನ್ಸ್ ಕ್ಲಬ್ ವಲಯ ಅಧಿಕಾರಿ ರಾಜಶೇಖರ ಅಕ್ಕಿ ಮಾತನಾಡಿದರು. ನೂತನ ಖಜಾಂಚಿ ಸಂಜೀವ ಶಿರೋಳ, ಕಾರ್ಯದರ್ಶಿ ಡಾ.ಉಮಾ ಗುಂಡಾ, ವಿವಿಧ ಪದಾಧಿಕಾರಿಗಳಾಗಿ ಡಾ.ವಿದ್ಯಾ ದಿನ್ನಿಮನಿ, ಸಿದ್ದು ನಕಾತಿ, ಶ್ರೀಶೈಲ ಕಾರಜೋಳ, ಪ್ರಕಾಶ ಕೋಳಿಗುಡ್ಡ, ಮಹಾಲಿಂಗ ಮೂಡಲಗಿ, ಹುಚ್ಚೇಶ ವಡ್ಡರ, ವಿಷ್ಣುಗೌಡ ಪಾಟೀಲ, ಡಾ.ಅಮೀತ ಅಂಬಿ, ಮಂಗಲಾ ತಾಳಿಕೋಟಿ, ಡಾ.ವಿರೇಶ ಹುಡೇದಮನಿ, ರಾಜು ಡಾಂಗೆ ಅವರಿಗೆ ಅಧಿಕಾರ ಹಸ್ತಾಂತರಿಸಲಾಯಿತು.

ಕ್ಲಬ್ ನಿರ್ದೇಶಕರಾದ ಡಾ.ವಿಶ್ವನಾಥ ಗುಂಡಾ, ಡಾ.ಅಶೋಕ ದಿನ್ನಿಮನಿ, ಸಂಜಯ ಅಂಬಿ, ಸೋಮಶೇಖರ ಸಂಶಿ, ಡಾ.ಎಂ.ಎಸ್.ಚನ್ನಾಳ, ರಮೇಶ ಶೆಟ್ಟರ ಸೇರಿದಂತೆ ಇದ್ದರು.

ಶಾಸಕ ಯತ್ನಾಳ ವಿರುದ್ಧದ ಚುನಾವಣೆ ಅರ್ಜಿ ವಜಾ

ವಿಜಯಪುರ : ರಾಜಕೀಯ ಪ್ರೇರಿತವಾಗಿ ದುರುದ್ದೇಶದಿಂದ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ದಾಖಲಿಸಿದ್ದ ಚುನಾವಣಾ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ಶುಕ್ರವಾರ ವಜಾಗೊಳಿಸಿದೆ.

ಇದಲ್ಲದೆ ಅರ್ಜಿದಾರರಿಗೆ ರೂ.1 ಲಕ್ಷ ದಂಡ ವಿಧಿಸಿದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿದ್ದ ಕಾಂಗ್ರೆಸ್ ಅಭ್ಯರ್ಥಿ ಅಬ್ದುಲ್‌ಹಮೀದ್ ಮುಶ್ರೀಫ್, ಹತಾಶರಾಗಿ 2023 ರ ಜೂನ್ 23 ರಂದು ದೂರು ನೀಡಿದ್ದರು. ಇದೀಗ ನ್ಯಾಯಾಲಯವು ಅರ್ಜಿ ವಜಾಗೊಳಿಸಿದಲ್ಲದೆ, ಅರ್ಜಿದಾರನಿಗೆ ರೂ.1 ಲಕ್ಷ ದಂಡ ವಿಧಿಸಿದೆ.

ರುಕ್ಮವ್ವ ಹೊನ್ನಪ್ಪ ಯಲ್ಲಟ್ಟಿ ನಿಧನ

ಮುಧೋಳ : ತಾಲೂಕಿನ ಕುಳಲಿ ಗ್ರಾಮದ ಶಿವ ಭಜನಾ ಕಲಾವಿದ ಹೊನ್ನಪ್ಪ ಯಲ್ಲಟ್ಟಿ ಅವರ ಧರ್ಮಪತ್ನಿ ಶ್ರೀಮತಿ ರುಕ್ಮವ್ವ ಯಲ್ಲಟ್ಟಿ ಅವರು ಜುಲೈ 14 ರಂದು ನಿಧನರಾದರು. ಅವರು ತಮ್ಮ ಹಿಂದೆ ಓರ್ವ ಪುತ್ರ, ಐದು ಜನ ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿದ್ಯಾರ್ಥಿಗಳು ಆರೋಗ್ಯ ಕಾಳಜಿ ರೂಢಿಸಿಕೊಳ್ಳುವುದು ಅವಶ್ಯಕ: ಜಾನಕಿ

ಮೂಡಲಗಿ : ವಿದ್ಯಾರ್ಥಿಗಳು ಆರೋಗ್ಯ ಕಾಳಜಿ ರೂಢಿಸಿಕೊಳ್ಳುವುದು ಅವಶ್ಯವಿದೆ ಇಂದು ಮೊಬೈಲ್ ಎಂಬ ಸಾಧನ ಮಕ್ಕಳ ಮಾನಸಿಕ ನೆಮ್ಮದಿ & ಆರೋಗ್ಯ ಹಾಳು ಮಾಡುತ್ತಿದ್ದು ಅಲ್ಲದೇ ಅನೇಕ ದುಶ್ಚಟಗಳಿಗೆ ಕಾರಣವಾಗುತ್ತಿದೆ ಎಂದು ಹಳ್ಳೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿ ಜಾನಕಿ ಹೇಳಿದರು.

ಶನಿವಾರ ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜಕಾರ್ಯ ಪದವಿ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದವತಿಯಿಂದ ಸಮೀಪದ ದತ್ತು ಗ್ರಾಮ ಮುನ್ಯಾಳದಲ್ಲಿ ಹಮ್ಮಿಕೊಂಡ ಎನ್.ಎಸ್.ಎಸ್. ವಾರ್ಷಿಕ ಶಿಬಿರವದಲ್ಲಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ ಮೊಬೈಲ್ ಬಳಿಕೆ ಕಡಿಮೆ ಮಾಡಬೇಕು ಮತ್ತುಮದ್ಯ,ಡ್ರಗ್ಸ್,ಧೂಮಪಾನದಂತಹ ಮಾದಕ ವ್ಯಸನಿ ಚಟುಗಳು ಯುವ ವಿದ್ಯಾರ್ಥಿಗಳಲ್ಲಿ

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು ಅದರಿಂದ ಇಂದಿನ ಯುವಕರು ತಮ್ಮ ಆರೋಗ್ಯವನ್ನು ಹಾನಿಮಾಡಿಕೊಳ್ಳುತ್ತಿದ್ದಾರೆ ಇಂತಹ ಚಟಗಳಿಂದ ದೂರ ಇದ್ದು ತಮ್ಮ ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳಲು ಹೆಚ್ಚಿನ ಆದ್ಯತೆ ನೀಡಬೇಕೆಂದು

ಮುನ್ಯಾಳ ಗ್ರಾಮ ಪಂಚಾಯತ ಸದಸ್ಯ ಅಂಬರೀಶ ನಾಯ್ಕ ಮಾತನಾಡಿ ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಇದೆ ನಾವೂ ಸೇವಿಸುವ ಆಹಾರ ನಾವೂ ಇರುವ ಪರಿಸರ ಉತ್ತಮವಾಗಿದ್ದರೆ ಒಳ್ಳೆಯ ಆರೋಗ್ಯ ಹೊಂದಲು ಸಾಧ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಆಯ್.ಟಿ.ಆಯ್ ಕಾಲೇಜು ಪ್ರಾಚಾರ್ಯ ಚಿದಾನಂದ ಶೆಟ್ಟರ ಉಪನ್ಯಾಸಕ ಡಾ.ಪ್ರಶಾಂತ್ ಮಾವರಕರ ಪ್ರಾಸ್ತಾವಿಕವಾಗಿ ಮಾತನಾಡಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜು ಉಪಪ್ರಾಚಾರ್ಯ ಗೀತಾ ಹಿರೇಮಠ ವಹಿಸಿಕೊಂಡು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುತ್ತಣ್ಣ ವಡೇರ, ಶಿವಾನಂದ ಬಿಳ್ಳೂರ,ರಮೇಶ ಪಾಟೀಲ, ಲಗ್ಮಣ್ಣ ಗೋಣಿ, ಸಂಜು ಹಿರೇಹೊಳಿ, ಸಿದ್ದಾರೂಢ ವಡೇರ.ಮಂಜುಳಾ ಮುರಗೋಡ ಎನ್.ಎಸ್.ಎಸ್. ಸಹಶಿಬಿರಾಧಿಕಾರಿ ಉಪನ್ಯಾಸಕ ರಾಜು ಪತ್ತಾರ ಇತರರು ಹಾಜರಿದ್ದರು.

ಶಿಬಿರಾರ್ಥಿ ರೇಷ್ಮಾ ನದಾಫ ನಿರೂಪಿಸಿದರು ಶಿಬಿರಾರ್ಥಿ ಸೌಜನ್ಯ ಮೂಡಲಗಿ ಸ್ವಾಗತಿಸಿದರು ಶಿಬಿರಾರ್ಥಿ ಅಬುಬಕರ ಡಾಂಗೆ ವಂದಿಸಿದರು.

ವೃತ್ತಿ ಬದುಕಿನಲ್ಲಿ ದೇಶ ಮತ್ತು ನಾಡಿಗಾಗಿ ಸೇವೆ ಮಾಡಬೇಕು: ಡಾ. ರಾಜೇಂದ್ರ ಸಣ್ಣಕ್ಕಿ

ಬೆಟಗೇರಿ : ಕೇಂದ್ರ ಸರ್ಕಾರದ ವಿವಿಧ ಇಲಾಖೆಯವಿವಿಧಉನ್ನತಹುದ್ದೆಗೆಕೌಜಲಗಿ ಗ್ರಾಮದ ಯುವಕರು ಆಯ್ಕೆಯಾಗಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಡಾ.ರಾಜೇಂದ್ರ ಸಣ್ಣಕ್ಕಿ ಹೇಳಿದರು.

ಗೋಕಾಕ ತಾಲೂಕಿನ ಕೌಜಲಗಿ ಗ್ರಾಮ ಪಂಚಾಯತಿ ವತಿಯಿಂದ ಜು.13ರಂದು ಹಮ್ಮಿಕೊಂಡ ಕೇಂದ್ರ ಸರ್ಕಾರದ ವಿವಿಧ ಇಲಾಖೆಯ ವಿವಿಧ ಉನ್ನತ ಹುದ್ದೆಗೆ ಆಯ್ಕೆಯಾದ ಕೌಜಲಗಿ ಗ್ರಾಮದ ಯುವಕರಿಬ್ಬರಿಗೆ ಸನ್ಮಾನ ನೆರವೇರಿಸಿ ಮಾತನಾಡಿ, ವೃತ್ತಿ ಬದುಕಿನಲ್ಲಿ ದೇಶ ಮತ್ತು ನಾಡಿಗಾಗಿ ಸೇವೆ ಮಾಡಬೇಕು. ಇನ್ನೂ ಉನ್ನತ ಮಟ್ಟದ ಹುದ್ದೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಲಿ ಎಂದು ಹಾರೈಸಿದರು.

ಭಾರತಸರ್ಕಾರದಭಾರತೀಯಕೃಷಿಇಲಾಖೆ ಹಿರಿಯ ತೋಟಗಾರಿಕೆ ಅಧಿಕಾರಿಯಾಗಿ ಕೌಜಲಗಿ ಗ್ರಾಮದ ನಾಗರಾಜ ಶಿವಾನಂದ ಶೆಟ್ಟರ, ಭಾರತ ಸರ್ಕಾರದ ಗೃಹ ಮಂತ್ರಾಲಯ ಕೇಂದ್ರ ಶಸತ್ರ ಪೋಲೀಸ್ ಪಡೆ ಅಸಿಸ್ಟಂಟ್ ಕಮಾಂಡೆಟ್‌ನಾಗಿ ಮದನಕುಮಾರ ಭೀಮಪ್ಪ ಹೊಸಮನಿ ಉನ್ನತ ಹುದ್ದೆಗೆ ಆಯ್ಕೆಯಾದ ಇವರನ್ನು ಕೌಜಲಗಿ ಗ್ರಾಮ ಪಂಚಾಯತಿ ವತಿಯಿಂದ ಸತ್ಕರಿಸಲಾಯಿತು.

ಗ್ರಾಪಂ ಅಧ್ಯಕ್ಷ ಅಶೋಕ ಉದ್ದಪ್ಪನ್ನವರ, ಮಹೇಶ ಪಟ್ಟಣಶೆಟ್ಟಿ, ಶಿವಾನಂದ ಲೋಕನ್ನವರ, ನೀಲಪ್ಪ ಕೇವಟಿ, ರವಿ ಪರುಶೆಟ್ಟಿ, ರಾಯಪ್ಪ ಬಳೋಲ್ಲಾರ, ಶಿವಪ್ಪ ಭಜಂತ್ರಿ, ಹಾಶೀಮ್ ನಾಗರ್ಚಿ, ಎಮ್.ಡಿ.ಖಾಜಿ, ಯಲ್ಲಪ್ಪ ಸುನ್ನಾಳ, ಭೀಮಪ್ಪ ಹೊಸಮನಿ, ಸ್ಥಳೀಯ ಗ್ರಾಪಂ ಕಾರ್ಯದರ್ಶಿ, ಸಿಬ್ಬಂದಿ ವರ್ಗ, ಗಣ್ಯರು, ಸ್ಥಳೀಯರು ಇದ್ದರು.

ಶಿಕ್ಷಣ ಮತ್ತು ಸಾಮಾಜಿಕ ಕಾರ್ಯವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ: ಡಾ. ಬೆಳಕೂಡ

ಮೂಡಲಗಿ : ಶಿಕ್ಷಣ ಮತ್ತು ಸಾಮಾಜಿಕ ಕಾರ್ಯವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಬೋಜರಾಜ ಬೆಳಕೂಡ ಹೇಳಿದರು.

ಸಮೀಪದ ತುಕ್ಕಾನಟ್ಟಿಯ ಸರಕಾರಿ ಪ್ರಾಥಮಿಕ ಶಾಲೆಯ ಬಾವಿಕೋಡಿ ತೋಟದಲ್ಲಿ ಕಲ್ಲೋಳಿಯ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಕಲಾ ಮಹಾವಿದ್ಯಾಲಯದ ಎನ್ ಎಸ್ ಎಸ್ ಘಟಕದ ಏಳು ದಿನಗಳ ಶಿಬಿರ ಮುಕ್ತಾಯ ಸಮಾರಂಬದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಡಳಿತಾಧಿಕಾರಿ ಪ್ರಕಾಶ ಗರಗಟ್ಟಿ ಮಾತನಾಡಿ 7 ದಿನಗಳವರೆಗೆ ಎನ್.ಎಸ್.ಎಸ್ ಶಿಬಿರದಲ್ಲಿ ವಿದ್ಯಾರ್ಥಿನಿಯರು ಕೈಗೊಂಡ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು

ಬಾವಿಕೋಡಿ ತೋಟ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಸಿದ್ದಾರೂಢ ಹಮ್ಮಿನವರ್ ಮಾತನಾಡಿ, ಬಸವೇಶ್ವರ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಶ್ರಮದಾನ ಮತ್ತು ಸಾಮಾಜಿಕ ಕಾರ್ಯ ಪ್ರಸಶನೀಯವಾಗಿದೆ ಎಂದರು.

ಈ ಸಂದರ್ಭದಲ್ಲಿ ತುಕ್ಕಾನಟ್ಟಿಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್ ಕೆ ಹುಲಕುಂದ್ ಹಾಗೂ ಧನಲಕ್ಷ್ಮಿ ಬ್ಯಾಂಕ್ ಅಧ್ಯಕ್ಷ ಮೌನೇಶ್ ಪತ್ತಾರ ಇವರನ್ನು ಸಂಸ್ಥೆ ವತಿಯಿಂದ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಉಪನ್ಯಾಸಕರಾದ ಜ್ಯೋತಿ ಮುತ್ನಾಳ ವಿದ್ಯಾ ಬಡಿಗೇರ್. ಲಕ್ಷ್ಮಿ ಕವಡಪ್ಪಗೋಳ ಆರಂಭದಲ್ಲಿ ಪದವಿ ಕಾಲೇಜಿನ ವಿದ್ಯಾರ್ಥಿ ಸಿದ್ದು ಮಾಳೇಗೋಳ ಸ್ವಾಗತಿಸಿ, ಲಕ್ಷ್ಮಿ ಶಿವಪುರಿ ಕಾರ್ಯನಿರ್ವಹಿಸಿದರು, ಗುರು ಕಡಕಬಾವಿ ವಂದಿಸಿದರು.

ಜ್ಞಾನ ಎಂಬುದು ಒಂದು ಸಾಗರ: ಜಿ.ಜಿ. ಕಿತ್ತೂರ

ಮಹಾಲಿಂಗಪುರ : ಜ್ಞಾನ ಎಂಬುದು ಒಂದು ಸಾಗರ ಇದ್ದಂತೆ. ಎಷ್ಟುಜ್ಞಾನ ಪಡೆದರು ತುಂಬಾ ಕಡಿಮೆ. ಕೊಠಡಿಯಲ್ಲಿ ಕ್ಲಿಷ್ಟಕರ ಸಂಗತಿಗಳನ್ನು ಪರಿಹಾರ ಕೊಂಡುಕೊಳ್ಳಲು ತರಬೇತಿಗಳನ್ನು ಪಡೆಯಬೇಕು ಎಂದು ಮಳಲಿ ಸರ್ಕಾರಿ ಪ್ರೌಢಶಾಲೆ ವಿಜ್ಞಾನ ಶಿಕ್ಷಕ ಜಿ.ಜಿ.ಕಿತ್ತೂರ ಹೇಳಿದರು.

ಸಮೀಪದ ರನ್ನಬೆಳಗಲಿಯ ಸಿದ್ಧಾರೂಢ ಸರ್ಕಾರಿ ಪ್ರೌಢಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮುಧೋಳ ತಾಲ್ಲೂಕು ಮಟ್ಟದ ವಿಜ್ಞಾನ ವಿಷಯ ಸಮೂಹ ಕಾರ್ಯಾಗಾರದಲ್ಲಿ ಮಾತನಾಡಿದರು.

ಮಾದರಿಪಾಠಗಳನ್ನುಕೊಠಡಿಯಲ್ಲಿಕೊಡಬೇಕಾದರೆ ಇತರೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಅವಕಾಶವು ಈ ತರಬೇತಿಯಲ್ಲಿ ಸಿಗುತ್ತದೆ.ವಿಜ್ಞಾನ ತಂತ್ರಜ್ಞಾನ ವಿಷಯವನ್ನು ಮಕ್ಕಳಿಗೆ ಮುಟ್ಟಿಸುವ ಪ್ರಯತ್ನ ಮಾಡೋಣ ಎಂದರು.

ರವೀಂದ್ರ ಕಂಬಾರ ಅಧ್ಯಕ್ಷತೆವಹಿಸಿ ಮಾತನಾಡಿ, ಶಿಕ್ಷಣ ಶಿಕ್ಷೆ ಆಗಬಾರದು. ಮಕ್ಕಳ ಸರ್ವತೋಮುಖ ಅಭಿವೃದ್ಧಿ ಬೆಳವಣಿಗೆಗೆ ಸಹಕಾರಿಯಾಗಬೇಕು. ವಿಷಯ ಸಮೂಹವು ಶಿಕ್ಷಕರಿಗೆ ಜ್ಞಾನವನ್ನು ಹೆಚ್ಚು ನೀಡುತ್ತದೆ.ಬೇರೆ ಬೇರೆ ಶಾಲೆಗೆ ಹೋಗಿ ವಿವಿಧ ರೀತಿಯ ಚಟುವಟಿಕೆಗಳನ್ನು ತಿಳಿದುಕೊಳ್ಳಲು ಅವಕಾಶವಾಗುತ್ತದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಗಿರೀಶ ಸಂಕ್ರಟ್ಟಿ ಕಾರ್ಯಾಗಾರ ಉದ್ಘಾಟಿಸಿದರು. ಹಲಗಲಿಯ ವಿಜ್ಞಾನ ಶಿಕ್ಷಕ ಬಿ.ಎಂ. ಹಂಪಿಹೊಳಿ, ಎಸ್.ಐ.ಗಂಗಾವತಿ, ಬಿ.ಪಿ.ಜೋಪಡೆ. ಶಿಕ್ಷಕ ಮಾಚಕನೂರ ಇದ್ದರು.

ಗುಳೇದಗುಡ್ಡ: 'ಟ್ಯಾಲೆಂಟ್ಸ್ ಡೇ' ಕಾರ್ಯಕ್ರಮ

ಗುಳೇದಗುಡ್ಡ : ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದೊಂದು ಪ್ರತಿಭೆಹುದುಗಿರುತ್ತದೆ.ಟ್ಯಾಲೆಂಟ್ಸ್ ಡೇ ವಿದ್ಯಾರ್ಥಿಗಳಿಗೆ ಒಂದು ಉತ್ತಮ ಅವಕಾಶವಾಗಿದ್ದು ಎಲ್ಲಾ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮಲ್ಲಿನ ಪ್ರತಿಭೆಯನ್ನು ಪ್ರದರ್ಶಿಸಬೇಕು. ಇದರಿಂದ ನಿಮ್ಮ ಪ್ರತಿಭೆಗೆ ಪ್ರೋತ್ಸಾಹ ದೊರೆಯುತ್ತದೆ ಎಂದು ರಾಠಿ ಹಾಗೂ ಕಾವಡೆ ಆಂಗ್ಲ ಮಾಧ್ಯಮ ಶಾಲೆಯ ಚೇರಮನ್ ಅಶೋಕ ಹೆಗಡೆ ಹೇಳಿದರು.

ಅವರು ಸ್ಥಳೀಯ ರಾಠಿ ಹಾಗೂ ಕಾವಡೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಟ್ಯಾಲೆಂಟ್ಸ್ ಡೇ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪ್ರತಿಭೆಯನ್ನು ಹೊರಹಾಕುವ ಇನ್ನಿತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ಪ್ರಾಥಮಿಕ ಶಾಲೆ ಮಕ್ಕಳು ಮತ್ತು ಭರತನಾಟ್ಯ ನೃತ್ಯದಲ್ಲಿ ಏಕಪಾತ್ರಾಭಿನಯ ಪಾತ್ರದಲ್ಲಿ ವೀರವನಿತೆ ಕಿತ್ತೂರ ಚೆನ್ನಮ್ಮ ಹಾಗೂ ಒನಕೆ ಓಬವ್ವ ಪಾತ್ರ, ಜಾನಪದ, ದೇಶಭಕ್ತಿಗೀತೆ ಪ್ರತಿಭೆಯನ್ನು ಪ್ರದರ್ಶಿಸಿದರು.

ಸಂಸ್ಥೆಯ ಸದಸ್ಯರಾದ ವಿಠ್ಠಲಸಾ ಕಾವಡೆ, ಶ್ಯಾಮಸುಂದರ ಮಾಲಪಾಣಿ, ಪುರುಷೋತ್ತಮ ಝುಂವರ, ಮುಖ್ಯೋಪಾಧ್ಯಾಯರಾದ ವಿ. ಬಿ. ಹಳ್ಳೂರ, ಜೆ.ಜೆ. ಲೋಬೋ, ಸುಜಾತಾ ಕರಡಿಗುಡ್ಡ, ಶಿಕ್ಷಕರಾದ ಸಂಗೀತಾ ಪರ್ವತೀಕರ, ಶೋಭಾ ಕಾವಡೆ, ಪೂರ್ಣಿಮಾ ಜವಳಿ, ಸಿ.ಎ. ಪರಗಿ, ಯು. ಕೆ. ಪೂಜಾರ, ಶಿವಕುಮಾರ ಪುರಾಣಿಕಮಠ ಮತ್ತಿತರರು ಇದ್ದರು.

ಹಲೋ.. ನಾನ್ ಎಸಿಪಿ ಎಂದವನಿಗೆ ಬಿತ್ತು ಗೂಸಾ

ರಬಕವಿ–ಬನಹಟ್ಟಿ : ಹಲೋ ಬೀಟ್ ಪೊಲೀಸಾ.. ನಾನ್ ಎಸಿಪಿ ಮಾತೋಡೋದು. ನಿನ್ನ ಅವ್ಯವಹಾರ ನನಗೆ ತಿಳಿದಿದೆ. ತಕ್ಷಣ 5 ಸಾವಿರ ಹಣ ಕಳಿಸಿ ಇಲ್ಲಿದ್ರೆ ನಿನ್ ಮೇಲೆ ತನಿಖೆ ಗ್ಯಾರಂಟಿ ಎಂದವ ಪೊಲೀಸ್ ಅತಿಥಿಯಾದ ಪ್ರಸಂಗ ಬನಹಟ್ಟಿ ಠಾಣೆಯಲ್ಲಿ ನಡೆದಿದೆ.

ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲೂಕಿನ ನಾವಲಗಿ ಗ್ರಾಮದ